ಹೇಳಿದೆ. ತಾವು ಇರಲಿಲ್ಲ. ಇದರ ಜೊತೆಗೆ ಇವತ್ತು ಕೊಡಗಿನಲ್ಲಿ ವಿದ್ಯುತ್ ಅಭಾವ ಬಹಳಷ್ಟು ಇದೆ. ಕಳೆದಸಾರಿ ಚುನಾವಣೆ ಸಂದರ್ಭದಲ್ಲಿ ನಾವು ಗ್ರಾಮಾಂತರ ಪ್ರದೇಶಕ್ಕೆ ಭೇಟಿ ಕೊಟ್ಟಾಗ ಸುಮಾರು 80ಕ್ಕಿಂತ ಹೆಚ್ಚು ವಯಸ್ಸಾದ ಜನರು ನಮ್ಮನ್ನು ಕೇಳುತ್ತಿದ್ದರು. ನಮಗೆ ಟಿ.ವಿ ನೋಡುವ ಅವಕಾಶ ಸಾಯೋ ಒಳಗಾದರೂ ಸಿಗುತ್ತಾ ಎನ್ನುವ ಪ್ರಶ್ನೆಯನ್ನು ಕೇಳುತ್ತಿದ್ದರು. ಇವತ್ತು ಕೊಡಗಿನಲ್ಲಿ ಹಳ್ಳಿಗಳಲ್ಲಿ ಕೇವಲ 50 ಪರ್‌ಸೆಂಟ್ ವಿದ್ಯುತ್ ವ್ಯವಸ್ಥೆ ಇಲ್ಲ. ಕತ್ತಲೆಯಲ್ಲಿಯೇ ಉಳಿಯುವ ಪರಿಸ್ಥಿತಿಯಲ್ಲಿ ನಾವು ಎರಡು ಸಾವಿರ ಇಸವಿಯಲ್ಲಿ ಇದ್ದೇವೆ. ಈ ರೀತಿ ಕೊಡಗಿನ ಸ್ಥಿತಿ ಇದೆ. ತಾವುಗಳೆಲ್ಲಾ ಎಚ್ಚರ ವಹಿಸಿ ಹೆಚ್ಚುಹಣ ಬಿಡುಗಡೆ ಮಾಡಿ ಕೊಡಗಿನ ಅಭಿವೃದ್ಧಿಪಡಿಸಬೇಕು. ನಮ್ಮಲ್ಲಿ ಹೆಚ್ಚು ಯೋಧರು ರಕ್ಷಣೆಗೆ ಹೋದ ಜನರು ಇದ್ದಾರೆ. ಅವರು ಈ ರಾಜ್ಯದ ಮೇಲೆ ಎದುರಿ ತಿರುಗಿ ಬೀಳುವುದು ಬೇಡವೆನ್ನುವ ಎಚ್ಚರಿಕೆಯ ಮಾತನ್ನು ಹೇಳುತ್ತಾ ನನಗೆ ಇಷ್ಟು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತಿದ್ದೇನೆ. ಧನ್ಯವಾದಗಳು.

10. ಪ್ರಕಟಣೆ:

ಮಾನ್ಯ ಉಪಾಧ್ಯಕ್ಷರು:

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ, ಕರ್ನಾಟಕ ವಿಧಾನ ಪರಿಷತ್ತು ದಿನಾಂಕ:20-04-2000ದಂದು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ, ಆಂಗೀಕರಿಸಿತೆಂದು ತಿಳಿಸುತ್ತಿದ್ದೇನೆ.

1. ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2000.
2. ಕರ್ನಾಟಕ ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ (ತಿದ್ದುಪಡಿ) ವಿಧೇಯಕ, 2000.
3. ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರ ಹಾಕುವ) (ತಿದ್ದುಪಡಿ) ವಿಧೇಯಕ, 2000.

11. ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದು)

+ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ): ಮಾನ್ಯ ಉಪಾಧ್ಯಕ್ಷರೇ, ರಾಜ್ಯಪಾಲರ ವಂದನಾ ನಿರ್ಣಯದ ಬಗ್ಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತಾ, ಹೊಸ ಸರ್ಕಾರ ಆಡಳಿತಕ್ಕೆ ಬಂದು ಈಗಾಗಲೇ ಆರು ತಿಂಗಳು ಕಳೆದಿದೆ. ಪಾರದರ್ಶಕ ಸರ್ಕಾರವನ್ನು ನೀಡುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಘೋಷಣೆಯನ್ನು ಮಾಡಿದ್ದಾರೆ. ಯಾವುದೇ ಕಡತಗಳು 15 ದಿನಗಳ ಮೇಲೆ ಇಲಾಖೆಯಲ್ಲಿ ಉಳಿಯುವುದಿಲ್ಲ ಎನ್ನುವ ವಿಚಾರವನ್ನು ಕೂಡ ಆಡಳಿತಕ್ಕೆ ಬಂದ ಹೊಸದರಲ್ಲಿ ಈ ಸರ್ಕಾರ ಹೇಳುತ್ತಾ ಬಂದಿದೆ.

ಹಿಂದೆ ಇದ್ದಂಥ ಜನತಾದಳ ಸರ್ಕಾರ ನಿಷ್ಕ್ರೀಯ ಸರ್ಕಾರ. ಇವರು ಜಗಳವಾಡುವುದರಲ್ಲೇ ಕಾಲ ಕಳೆದಿದ್ದಾರೆ. ಯಾವುದೇ ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡಿಲ್ಲ ಎನ್ನುವುದನ್ನು ಜನಗಳ ಮುಂದೆ ಹೇಳಿ ಅಧಿಕಾರಕ್ಕೆ ಬಂದಂಥ ಈ ಒಂದು ಆಡಳಿತ ಪಕ್ಷದ ಸರ್ಕಾರ ಇದುವರೆಗೂ ಮಾಡಿದ ಯಾವುದೇ ಸುಧಾರಣೆಯನ್ನು ನೋಡುವುದಕ್ಕೆ ಸಾಧ್ಯವಾಗಿಲ್ಲ. ಮೊದಲನೆಯದಾಗಿ ಆಡಳಿತದಲ್ಲಿ ಪ್ರಮುಖವಾಗಿ ಸುಧಾರಣೆಯಾಗಬೇಕಾಗಿರುವುದು ನಮ್ಮ ಸಚಿವಾಲಯ ಏನು ಇದೆ, ಅಲ್ಲಿ ಯಾವುದೇ ರೀತಿಯ ಕಡತಗಳ ವಿಲೇವಾರಿ ಸರಿಯಾಗಿ ಆಗುತ್ತಿಲ್ಲ. ಆರು ತಿಂಗಳಿಂದ ನಾನು ಗಮನಿಸಿದ ಹಾಗೆ ಅಂಥ ಚುರುಕಾಗಿ ನಡೆದಂಥ ನಿದರ್ಶನಗಳು ಕಾಣುತ್ತಾ ಇಲ್ಲ. ಬಹುಮಹಡಿ ಕಟ್ಟಡದಲ್ಲಿ ಏನು ಕಛೇರಿಗಳು ಇವೆ. ಅಲ್ಲಿ ಯಾವುದಾದರೂ ಜಿಲ್ಲಾ ಕೇಂದ್ರದಿಂದ, ಜಿಲ್ಲಾಧಿಕಾರಿಯಿಂದಲೋ ಅಥವಾ ಜಿಲ್ಲಾ ಪರಿಷತ್ ಮುಖ್ಯಾಧಿಕಾರಿಯಿಂದಲೋ ಅಥವಾ ಜಿಲ್ಲಾಮಟ್ಟದ ಅಧಿಕಾರಿಯಿಂದ ಒಂದು ಫೈಲ್ ಕ್ಲಿಯರೆನ್ಸ್‌ಗೆ ಬಂದರೆ ಅಲ್ಲಿ ಪ್ರಭಾವಯುತವಾಗಿ ಹೋಗಿ ಅದನ್ನು ಒತ್ತಾಯ ಮಾಡದಿದ್ದರೆ ತಾನೇ ತಾನಾಗಿ ಇದುವರೆಗೆ ಯಾವುದೇ ಒಂದು ಕಡತಗಳು ಅಲ್ಲಿಂದ ಹೊರಗೆ ಬರತಕ್ಕಂಥ ಸನ್ನಿವೇಶಗಳೇ ಕಾಣುತ್ತಿಲ್ಲ. ಅಲ್ಲಿ ಮೂರುವರೆ ಗಂಟೆ ಮೇಲೆ ಸಾರ್ವಜನಿಕರಿಗೆ ಪ್ರವೇಶ ಎಂದು ಹೇಳುತ್ತಾರೆ. ಮೂರುವರೆ ಗಂಟೆಯವರೆಗೆ ಎಷ್ಟು ಜನ ನೌಕರರು ತಮ್ಮ ಸೀಟುಗಳಲ್ಲಿ ಕುಳಿತಿರುತ್ತಾರೆ ಎಂದು ನಮ್ಮ ಸಚಿವರುಗಳು ಹೋಗಿ ಗಮನಿಸಿದರೆ ಅವರ ಪರಿಸ್ಥಿತಿಯೇನು ಎಂದು ಅರ್ಥವಾಗುತ್ತದೆ. ಲಿಫ್ಟ್ ಹತ್ತುವುದರಲ್ಲೇ ಸುಮಾರು ಅರ್ಧ ಗಂಟೆ, ಮುಕ್ಕಾಲು ಗಂಟೆ ಕಾಲ ಕಳೆಯುತ್ತಾರೆ. ಮಹಿಳಾ ನೌಕರರು ತಮ್ಮ ತಮ್ಮ ಕಛೇರಿಗೆ ಹೋಗಬೇಕಾದರೆ ಒಂದೊಂದು ಗಂಟೆ ಪಕ್ಕದಲ್ಲಿ ನಿಂತುಕೊಂಡು ಮಾತನಾಡುತ್ತಿರುತ್ತಾರೆ. ಅಲ್ಲಿ ಯಾರನ್ನು ಹೋಗಿ ಕೇಳಿದರೂ ಈಗ ತಾನೇ ಟೀಗೆ ಹೋಗಿದ್ದಾರೆ. ಕಾಫಿಗೆ ಹೋಗಿದ್ದಾರೆ, ಪಕ್ಕದಲ್ಲಿ ಸೆಕ್ರೆಟರಿಯವರು ಕರೆದಿದ್ದಾರೆ ಅಥವಾ ಡೆಪ್ಯುಟಿ ಸೆಕ್ರೆಟರಿಯವರು ಕರೆದಿದ್ದಾರೆ ಎಂದು ಹೇಳುತ್ತಾರೆ. ಸೆಕ್ರೆಟರಿಯವರನ್ನು ಕೇಳಿದರೆ, ವಿಧಾನಸೌಧಕ್ಕೆ ಹೋಗಿದ್ದಾರೆ ಈ ರೀತಿಯಾದ ಉತ್ತರಗಳು ಬರುತ್ತವೆಯೇ ಹೊರತು ನಮಗೆ ಯಾರೂ ನಿರ್ದಿಷ್ಟವಾಗಿ ಹೇಳುವುದಿಲ್ಲ. ಅಲ್ಲಿ ಕೊನೆಯ ಪಕ್ಷ ಶಾಸಕರಾಗಿ ಹೋದರೂ ಸಹ ನಮಗೆ ಸರಿಯಾದಂತಹ ಮಾಹಿತಿಗಳನ್ನು ಕೊಡುವುದಿಲ್ಲ. ಮಾಹಿತಿ ಸಿಗದೇ ಇರುವಂತಹ ವಾತಾವರಣ ಈ ಸಚಿವಾಲಯದಲ್ಲಿ ನಡೆಯುತ್ತಿದೆ. ಈ ಸಚಿವಾಲಯದ ಕಾರಿಡಾರ್‌ನಲ್ಲಿ ಹರಟೆ ಹೊಡೆಯುವುದರಲ್ಲಿ ಹೆಚ್ಚಿನ ಸಮಯವನ್ನು ಕಳೆಯುತ್ತಿದ್ದಾರೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಎರಡು ಮೂರು ಕಡತಗಳು, ಅವು ಸಾರ್ವಜನಿಕರ ವಿಚಾರಕ್ಕೆ ಸಂಬಂಧಪಟ್ಟಂತವು. ನಮ್ಮ ಗುಂಡ್ಲುಪೇಟೆಯಲ್ಲಿ ಬಂಡೀಪುರ ಅಭಯಾರಣ್ಯದಲ್ಲಿ ಈ ಕಾಡು ಕುರುಬ ಜನಾಂಗದವರನ್ನು ರೀಹ್ಯಾಬಿಲಿಟೇಟ್ ಮಾಡಬೇಕೆಂದು ಹೇಳಿ ಅವರಿಗೆ ಭೂ ಮಂಜೂರಾತಿ ಮಾಡುವುದಕ್ಕೆ 82 ಜನರ ಒಂದು ಕಡತವನ್ನು ಸುಮಾರು ಎರಡು ವರ್ಷದ ಹಿಂದೆ ಜಿಲ್ಲಾಧಿಕಾರಿಗಳು ಕಳುಹಿಸಿಕೊಟ್ಟಿದ್ದಾರೆ. ಇವತ್ತಿನವರೆಗೆ ಆ ಕಡತ ಏನಾಗಿದೆ. ಆ ಫೈಲ್ ಎಲ್ಲಿದೆ ಎನ್ನುವುದನ್ನು ಪತ್ತೆ ಹಚ್ಚುವುದಕ್ಕೆ ನನಗೆ ಸಾಧ್ಯವಾಗಿಲ್ಲ. ನಾನು ಅನೇಕ ಬಾರಿ ಸೆಕ್ರೆಟರಿಯೇಟ್‌ನಲ್ಲಿ ರೆವಿನ್ಯೂ ಕಮೀಷನರ್‌ರವರಿಂದ ಹಿಡಿದು ಎಲ್ಲರಿಗೂ ಪ್ರಸ್ತಾಪ ಮಾಡುತ್ತಿದ್ದೇನೆ. ನನ್ನ ಕಡತ ಕೇಳಿದರೆ ಹೆಗ್ಗಡದೇವನಕೋಟೆಯಲ್ಲಿ ಯಾವುದೋ ಒಂದು ರೀಹ್ಯಾಬಿಲಿಟೇಟ್ ಮಾಡುವುದಕ್ಕೆ ಮೂವ್ ಮಾಡುತ್ತಿರುವಂತಹ ಕಡತದ ಒಂದು ವಿಚಾರವನ್ನು ತಿಳಿಸುತ್ತಾರೆ.

ಅದೇ ರೀತಿ ಇನ್ನೊಂದು ವಿಚಾರ. ನಮ್ಮ ಕ್ಷೇತ್ರದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಹೊಸದಾಗಿ ರಚನೆ ಆಯಿತು. ಅದಕ್ಕೆ ಹತ್ತು ಎಕರೆ ಭೂಮಿಯನ್ನು ಖಾಸಗಿಯವರಿಂದ ಖರೀದಿ ಮಾಡಿದರು. ಅದನ್ನು ಎಲಿನೇಟ್ ಮಾಡುವುದಕ್ಕೆ ಮತ್ತೆ ಭೂಸುಧಾರಣಾ ಕಲಂ 109ರ ಮೇರೆಗೆ ಸ್ಪಾ ಂಪ್ ಡ್ಯೂಟಿ ಎಕ್ಸ್‌ಂಪೆಷನ್ ಕೊಟ್ಟು ಅದನ್ನು ಕನ್‌ವರ್ಷನ್ ಮಾಡಬೇಕು ಎಂದು ಹೇಳಿ 1997ರಲ್ಲಿ ಜಿಲ್ಲಾಧಿಕಾರಿಗಳಿಂದ ಶಿಫಾರಸ್ ಬಂತು. ಆದರೆ ಇವತ್ತಿನವರೆಗೆ ಆ ಕಡತ ಏನಾಗಿದೆ ಎಂಬ ಸ್ಪಷ್ಟವಾದ ಮಾಹಿತಿ ನಮ್ಮ ಮಾರ್ಕೆಟಿಂಗ್ ಡೈರೆಕ್ಟರ್‌ರವರಲ್ಲೂ ಇಲ್ಲ. ಕುದಾಯ ಇಲಾಖೆಯಲ್ಲೂ ಕೂಡ ನಮಗೆ ಸಿಗುತ್ತಿಲ್ಲ. ಅದೇ ರೀತಿ ನಮ್ಮ ಗುಂಡ್ಲು ಪೇಟೆಗೆ ಕುಡಿಯುವ ನೀರಿನ ಯೋಜನೆ ಕೆಯುಡಬ್ಲ್ಯೂಎಸ್‌ಬಿ ಇಂದ ಬಹಳ ಹಿಂದೆ ಮಾನ್ಯ ಬಂಗಾರಪ್ಪನವರು ಮುಖ್ಯ ಮಂತ್ರಿ ಆಗಿದ್ದ ಕಾಲದಲ್ಲಿ ಮಂಜೂರಾತಿ ದೊರೆತಿದ್ದು ಕೆಲಸ ಇನ್ನೂ ಮುಂಗಡಗತಿಯಿಂದ ನಡೆಯುತ್ತಿದೆ. ಆ ಒಂದು ಕೆಲಸಕ್ಕೆ ಟ್ರೀಟ್‌ಮೆಂಟ್ ಪ್ಲಾಂಟ್, ಮತ್ತು ಪಂಪಿಂಗ್ ಸ್ಟೇಷನ್ ಮಾಡುವುದಕ್ಕೆ ಎಂದು ಹೇಳಿ ಒಂದೆರಡು ಕಡೆ ಖಾಸಗಿಯವರಿಂದ ಜಮೀನು ಖರೀದಿ ಮಾಡಿ ಅದರ ಒಂದು ಕಡತವನ್ನು ಇಲ್ಲಿಗೆ ಕಳುಹಿಸಿದರೆ ಇವತ್ತಿನವರೆಗೆ ಕೂಡ ಅಂದರೆ ಸುಮಾರು ಒಂದೂವರೆ ವರ್ಷದಿಂದ ಆ ಕಡತ ಸೆಕ್ರೆಟರಿಯೇಟ್‌ನಲ್ಲಿಯೇ ಸ್ಥಗಿತ ಆಗಿದೆ. ಈ ರೀತಿ ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ, ಇಡೀ ತಾಲ್ಲೂಕಿನ ಜನತೆಗೆ ಸಂಬಂಧಪಟ್ಟಂತಹ ಕಡತಗಳು ಸ್ಥಗಿತ ಆಗಿದೆ. ಅದೇ ಯಾವುದಾದರೂ ಡೀಲಿಮಿಟೇಷನ್ ಮಾಡುವಂತಹದು ಅಥವಾ ಎನ್‌ಓಸಿ ಕೇಳುವಂತಹದು, ಎಚ್‌ಯುಡಿಯದು, ಅಂತಹ ಫೈಲ್‌ಗಳು ನಾಲ್ಕು ನಾಲ್ಕು ದಿನಕ್ಕೆ ಅಲ್ಲಿ ಕ್ಲಿಯರ್ ಆಗಿ ಬರುವುದನ್ನು ನಾವು ನೋಡುತ್ತಿದ್ದೇವೆ. ಆದರೆ ಇಂತಹ ಸಾರ್ವಜನಿಕ ಮಹತ್ವವಾದಂತಹ ಕಡತಗಳ ಬಗ್ಗೆ ಅಲ್ಲಿಯ ಅಧಿಕಾರಿಗಳು, ನಾವು ಸರ್ಕಾರಿ ನೌಕರರಾಗಿ ಸೇರಿದ್ದೇವೆ. ನಮ್ಮ ಕರ್ತವ್ಯ ಎಂದು ಹೇಳಿ ಅಲ್ಲಿ ಯಾರೂ ಭಾವನೆ ಮಾಡಿ ಕಳುಹಿಸುತ್ತಿಲ್ಲ. ಯಾರಾದರೂ ಹೋಗಿ ಅಲ್ಲಿ ಖಾಸಗಿಯಾಗಿ ನಿಂತು ಒತ್ತಾಯ ಮಾಡಿದರೆ ಮಾತ್ರ ಫೈಲ್ ಮೂವ್‌ಮೆಂಟ್ ಆಗುತ್ತದೆಯೇ ಹೊರತು, ಯಾವುದೇ ರೀತಿಯಲ್ಲಿ ಫೈಲ್‌ಗಳು ವಿಲೇವಾರಿ ಆಗುತ್ತಿಲ್ಲ. ಈ ಬಗ್ಗೆ ನಾವು ಸರ್ಕಾರದ ಮೇಲೆ ಬಹಳ ಭರವಸೆಯನ್ನು ಇಟ್ಟುಕೊಂಡಿದ್ದೆವು. ಮಾನ್ಯ ಮುಖ್ಯಮಂತ್ರಿಗಳು ಆಡಳಿತದಲ್ಲಿ ಚುರುಕನ್ನು ತರುತ್ತಾರೆ. ಮತ್ತೆ ಯಥೇಚ್ಚವಾಗಿ ಬಹುಮತದಿಂದ ಗೆದ್ದಿರುವಂತಹ ಈ ಪಕ್ಷ ಆಡಳಿತದಲ್ಲಿ ಬಹಳ ಸುಧಾರಣೆಯನ್ನು ಮಾಡುತ್ತಾರೆ ಎಂದು ನಾವು ಬಹಳ ನಿರೀಕ್ಷೆ ಇಟ್ಟುಕೊಂಡಿದ್ದೆವು. ಆದರೆ ಕಳೆದ ಆರು ತಿಂಗಳಿಂದ ಅಂತಹ ಯಾವುದೇ ಒಂದು ನಿರೀಕ್ಷೆ ನಮಗೆ ಹುಸಿ ಆಗುವಂತೆ ಕಂಡಿಲ್ಲ. ಮತ್ತೆ ವಿಶೇಷವಾಗಿ ರಾಜ್ಯಮಟ್ಟದ ವಿಚಾರವನ್ನು ಹೇಳುವುದಕ್ಕೆ ಹೋಗದೇ ಜಿಲ್ಲಾ ಮಟ್ಟದ ವಿಚಾರ ಹೇಳುವುದಾದರೆ, ಕಳೆದ 1997ರ ಆಗಸ್ಟ್ 15ನೇ ತಾರೀಖು ರಾಜ್ಯ ಸರ್ಕಾರ ಏಳು ಹೊಸ ಜಿಲ್ಲೆಗಳನ್ನು ರಚನೆ ಮಾಡಿತು. ಅದರಲ್ಲಿ ನಮ್ಮ ಚಾಮರಾಜನಗರ ಕೂಡ ಹೊಸದಾಗಿ ರಚನೆ ಆದಂತಹ ಜಿಲ್ಲೆ. ಆಗಿದ್ದಂತಹ ಮಾನ್ಯ ಶಾಸಕರಾದ ವಾಟಾಳ್ ನಾಗರಾಜ್ ಅವರು ಒತ್ತಾಯ ಮಾಡುತ್ತಿದ್ದರು. ನಾವು ಹಾಗೂ ಮಾನ್ಯ ಕೃಷ್ಣಮೂರ್ತಿಯವರು ಕೂಡ ಹಿಂದಿನ ಹನೂರು ಕ್ಷೇತ್ರದ ಶಾಸಕರಾಗಿದ್ದಂತಹ ಶ್ರೀ ನಾಗಪ್ಪನವರೂ ಒತ್ತಾಯ ಮಾಡುತ್ತಿದ್ದರು. ನಾವೇನೋ ಹೊಸ ಜಿಲ್ಲೆ ಆದರೆ ಆಡಳಿತದಲ್ಲಿ ಪಾರದರ್ಶಕತೆ ಬರುತ್ತದೆ. ಮತ್ತೆ ಸಣ್ಣ ಜಿಲ್ಲೆ ಆದಷ್ಟೂ ಆಡಳಿತದಲ್ಲಿ ಹೆಚ್ಚಿನ ಯಶಸನ್ನು ಕಾಣಬಹುದು.

ಜನಸಾಮಾನ್ಯರ ಕೆಲಸ ಕಾರ್ಯಗಳು ಆದಷ್ಟು ಬೇಗ ಚುರುಕಾಗಿ ಆಗುತ್ತವೆ ಎಂದು ಪ್ರಯತ್ನ ಮಾಡಿದ್ದು ನಿಜ. ಆದರೆ ಆ ಹೊಸ ಜಿಲ್ಲೆ ಆದ ಮೇಲೆ ಅದಕ್ಕೇನು ಒಂದು ಶಾಪ ಬಂದಿದೆಯೋ ಏನೋ ಗೊತ್ತಿಲ್ಲ. ಆ ಜಿಲ್ಲೆಗೆ ಸಂಬಂಧಪಟ್ಟಂತಹ ಯಾವುದೇ ವಿಚಾರಗಳನ್ನೂ ಕೂಡ, ಯಾರೂ ಸಹ ಆಸಕ್ತಿ ತೆಗೆದುಕೊಂಡು ಮಾಡುತ್ತಿಲ್ಲ. ಜಿಲ್ಲಾ ಮಟ್ಟದ ಕಛೇರಿಗಳಲ್ಲಿ ನೌಕರರ ವರ್ಗದ ಕೊರತೆಯಿಂದ ಯಾವುದೇ ಫೈಲ್ ಮೂವ್‌ಮೆಂಟ್ ಆಗುತ್ತಿಲ್ಲ. ಜಿಲ್ಲಾ ಮಟ್ಟದ ಅಧಿಕಾರಿ ಅವರೇ ಕುರ್ಚಿ ಹಾಕಿಕೊಳ್ಳಬೇಕು. ಅವರೇ ಕುಳಿತುಕೊಳ್ಳಬೇಕು. ಒಬ್ಬ ಅಟೆಂಡರ್ ಕೂಡ ಅವರ ಜೊತೆಯಲ್ಲಿ ಕೆಲಸ ಮಾಡುವುದಕ್ಕೆ ಬರದೇ ಇರುವಂತಹ ಪರಿಸ್ಥಿತಿ ಇವತ್ತು ನಮ್ಮ ಚಾಮರಾಜನಗರ ಜಿಲ್ಲೆಯಲ್ಲಿ ನಾವು ಕಾಣುತ್ತಿದ್ದೇವೆ. ಮತ್ತು ಅಲ್ಲಿಯ ಸಮಸ್ಯೆಗಳನ್ನು ನಾವು ಯಾವ ರೀತಿ ಹೇಳಬೇಕು ಎಂದು ನಮಗೆ ಅರ್ಥ ಆಗುತ್ತಿಲ್ಲ. ಏಕೆಂದರೆ ಇವತ್ತು ಬಂದಂತಹ ಸರ್ಕಾರದ ಅನೇಕ ಮಂತ್ರಿಗಳು ಮೈಸೂರು ನಗರಕ್ಕೆ ಸಾಂಸ್ಕೃತಿಕ ನಗರ ಮತ್ತು ಗಾರ್ಡನ್ ಸಿಟಿ, ಮತ್ತು ಮೈಸೂರು ರಾಜವಂಶಜರು, ಯದುವಂಶದವರು ಆಳಿದಂತಹ ಒಂದು ಕೇಂದ್ರ ಎಂದು ಹೇಳುತ್ತಾರೆ. ಇಂತಹ ಮೈಸೂರಿಗೆ ಬಹುತೇಕ ಎಲ್ಲಾ ಸಚಿವರೂ ಬಂದಿದ್ದಾರೆ. ಆದರೆ ಇಬ್ಬರೋ ಮೂವರೋ ಸಚಿವರು ಮಾತ್ರ ಪಕ್ಕದ ಚಾಮರಾಜನಗರ ಜಿಲ್ಲೆಗೆ ಭೇಟಿ ಕೊಟ್ಟಿದ್ದಾರೆ. ಬೇರೆಯವರು ಮೈಸೂರು ಪೇಟವನ್ನು ತೊಡಗಿಸಿಕೊಂಡು ಕಾಂಗ್ರೆಸ್ ಕಛೇರಿಗೆ ಭೇಟಿ ಕೊಟ್ಟು, ಆ ಮೈಸೂರು ಪೇಟೆಯ ಮೇಲೆ ಒಂದು ಗರಿ ಹಾಕಿಕೊಂಡು ಹೊಸ ಸಂಪ್ರದಾಯವನ್ನು ಕೂಡ ಪ್ರಾರಂಭ ಮಾಡಿದ್ದಾರೆ. ಹೀಗಾಗಿ ನಾವು ಈಗ ಪತ್ರಿಕೆಗಳಲ್ಲಿ ಆ ಒಂದು ಪೇಟವನ್ನು ಸನ್ಮಾನ ನಡೆಸುತ್ತಿರುವುದನ್ನು ನೋಡುತ್ತಿದ್ದೇವೆಯೇ ಹೊರತು ಅಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳು ಮತ್ತು ಪಕ್ಕದ ನಗರದ ಬಗ್ಗೆ ಗಮನ ಇಲ್ಲ. ಮೈಸೂರು ಜಿಲ್ಲೆ ಸಾಕಷ್ಟು ಸಮೃದ್ಧವಾಗಿದೆ ಮತ್ತು ಅಭಿವೃದ್ಧಿಯನ್ನೂ ಕಂಡಿದೆ.

ಶ್ರೀ ಕೆ. ಶ್ರೀನಿವಾಸಗೌಡ (ಕುದುವನಹಳ್ಳಿ): ಮಾನ್ಯ ಉಪಾಧ್ಯಕ್ಷರೆ, ಮೈಸೂರಿಗೆ ಹೋಗಲು ಎಲ್ಲಾ ಮಂತ್ರಿಗಳು ಬಹಳ ಖುಷಿಯಾಗಿರುತ್ತಾರೆ. ಚಾಮರಾಜ ನಗರಕ್ಕೆ ಹೋದರೆ ಅವರ ಮಂತ್ರಿಗಿರಿ ಹೋಗಿ ಬಿಡುತ್ತದೆ ಎನ್ನುವಂತಹ ಭಯ, ಮೊದಲಿನಿಂದ ಅದು ಏಕೋ ಒಂದು ಪ್ರತೀತಿ ಇದೆ. ಆದ್ದರಿಂದ ಯಾವ ಮಂತ್ರಿಗಳೂ, ಯಾವ ಮುಖ್ಯಮಂತ್ರಿಗಳೂ ಚಾಮರಾಜನಗರಕ್ಕೆ ಬರುವುದಿಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರೇ, ನೀವಾದರೂ ಹೋಗಿ ಬನ್ನಿ. ಏಕೆಂದರೆ ನಿಮಗೆ ಅವುಗಳ ಮೇಲೆ ನಂಬಿಕೆ ಇಲ್ಲ. ಆದರಿಂದ ನೀವಾದರೂ ಹೋಗಿ ಬನ್ನಿ. ಬಹಳ ಜನ ಚಾಮರಾಜನಗರಕ್ಕೆ ಅದಕ್ಕೋಸ್ಕರವೇ ಹೋಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಮೊನ್ನೆ ಪಂಚಾಯತಿ ಎಲೆಕ್ಷನ್ ಬಂತು ಎಂದು ಹೇಳಿ ಕಾರ್ಯಕ್ರಮವನ್ನು ಮುಂದೆ ಹಾಕಿದೆವು. ಇಲ್ಲದೇ ಇದ್ದರೆ ಮಂಡ್ಯ ಮತ್ತು ಚಾಮರಾಜನಗರದಲ್ಲಿ ಒಂದು ದಿವಸ ಇರುತ್ತಿದ್ದೆ.

ಶ್ರೀ ಹೆಚ್.ಎಸ್. ಮಹದೇವ್ ಪ್ರಸಾದ್: ಮಾನ್ಯ ಗೃಹ ಸಚಿವರು ಚಾಮರಾಜನಗರಕ್ಕೆ ಬಾರದೇ ಕೊಳ್ಳೇಗಾಲ, ಸಂತೇಮಾರಹಳ್ಳಿ ಮುಖಾಂತರ ಮೈಸೂರಿಗೆ ಹೋದರು. ನಮ್ಮ ಚಾಮರಾಜನಗರದ ಜಿಲ್ಲಾ ಪರಿಷತ್ತಿನಲ್ಲಿ 80 ಸ್ಯಾಂಕ್ಷನ್ಡ್ ಪೋಸ್ಟ್‌ಗಳು ಇವೆ. ಆದರೆ ಆ ಇಲಾಖೆಯಲ್ಲಿ 20 ಜನ ನೌಕರರು ಇದ್ದಾರೆಯೇ ಹೊರತು ಇನ್ನು 60 ಪೋಸ್ಟ್‌ಗಳು ವೇಕೆಂಟ್

ಇವೆ. ಯಾವ ಇಲಾಖೆಗೆ ಕೇಳಿದರೂ ಯಾವುದೇ ಮಾಹಿತಿ ಸಿಗುವುದಿಲ್ಲ. ಅಲ್ಲಿಗೆ ಮೈಸೂರಿನಿಂದ ಒಂದು ಟ್ರೈನ್ ಬೆಳಿಗ್ಗೆ 9ಕ್ಕೆ ಹೊರಟು 10.30ಕ್ಕೆ ಚಾಮರಾಜನಗರಕ್ಕೆ ಬರುತ್ತದೆ. 4.45ಕ್ಕೆ ಚಾಮರಾಜನಗರ ಬಿಟ್ಟು ಮೈಸೂರು ಸೇರುತ್ತದೆ. ಆ ಟ್ರೈನ್ ಟೈಮಿಂಗ್ಸ್‌ಗೆ ಅಲ್ಲಿನ ನೌಕರರು ಹೊಂದಾಣಿಕೆ ಆಗಿದ್ದಾರೆಯೇ ಹೊರತು ಅಲ್ಲಿಯ ಅಭಿವೃದ್ಧಿಯ ಕೆಲಸಗಳು ಆಗುತ್ತಿಲ್ಲ. ಏನಾದರೂ ಟ್ರೈನ್ ಟೈಮಿಗೆ ಹತ್ತು ನಿಮಿಷ ವ್ಯತ್ಯಾಸವಾದರೂ ಯಾವ ಅಧಿಕಾರಿಗಳೂ ಕೂಡ ಕಛೇರಿಯಲ್ಲಿ ಇರುವುದಿಲ್ಲ. ಕಾರಣ ಅಲ್ಲಿ ಉಳಿಯುವುದಕ್ಕೆ ಸಾಕಷ್ಟು ವಾಸ್ತವ್ಯ ಇಲ್ಲ. ಸರಿಯಾದ ರೀತಿಯ ವಸತಿ ಸೌಕರ್ಯಗಳು ಇಲ್ಲ. ಮತ್ತು ಇದುವರೆಗೆ ಅದೂ ಒಂದು ತಾಲ್ಲೂಕು ಕೇಂದ್ರವಾಗಿದ್ದು, ಈಗ ಜಿಲ್ಲಾ ಕೇಂದ್ರವಾಗಿ ಮಾರ್ಪಟ್ಟಿರುವುದರಿಂದ ಅದನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡತಕ್ಕಂಥಹ ಕಾರ್ಯವನ್ನು ನಮ್ಮ ಸರ್ಕಾರ ಕೈಗೆ ಎತ್ತಿಕೊಳ್ಳುತ್ತಾರೆ ಎಂಬ ಆಸೆ ನಮ್ಮಲ್ಲಿ ಇತ್ತು. ಆದರೆ ಈ ಮುಂಗಡ ಪತ್ರದಲ್ಲಿ ಆಗಲೀ ಅಥವಾ ಈ ರಾಜ್ಯಪಾಲರ ಭಾಷಣದಲ್ಲಿ ಆಗಲೀ ಹೊಸ ಜಿಲ್ಲೆಗಳ ಬಗ್ಗೆ ಒಂದು ಚಕಾರವನ್ನೂ ಎತ್ತದೇ ಇರುವುದು ಕಂಡು ಬಂದಿದೆ. ಹಿಂದಿನ ಸರ್ಕಾರ ಹೊಸ ಜಿಲ್ಲೆಗಳನ್ನು ಮಾಡಿದೆ. ನಾವ್ಯಾಕೆ ಅದಕ್ಕೆ ಗಮನ ಕೊಡಬೇಕು ಎನ್ನುವ ಅಭಿಪ್ರಾಯ ಈ ಸರ್ಕಾರದಲ್ಲಿ ಏನಾದರೂ ಇದೆಯೋ ಎನ್ನುವ ಭಾವನೆ ಆ ಜಿಲ್ಲೆಯ ಜನಗಳಲ್ಲಿ ಮೂಡುವಂತಹ ಪರಿಸ್ಥಿತಿ ನಿರ್ಮಾಣ ಆಗಿದೆ. ಅದರ ಜೊತೆಗೆ ನಮ್ಮ ಜಿಲ್ಲೆಯಲ್ಲಿಯೇ ವೀರಪ್ಪನ್ ಸಂಚಾರ ಇದೆ. ಏಕೆಂದರೆ ನಾಲ್ಕೂ ಗಡಿ ತಾಲ್ಲೂಕು. ಯಳಂದೂರು, ಕೊಳ್ಳೇಗಾಲ, ಚಾಮರಾಜನಗರ, ಗುಂಡ್ಲುಪೇಟೆ. ಈ ನಾಲ್ಕು ಅರಣ್ಯದ ಅಂಚಿನಲ್ಲಿರುವಂತಹ ಪ್ರದೇಶ. ಯಾವುದೇ ನೀರಾವರಿ ಸೌಲಭ್ಯ ಇಲ್ಲದೇ ಇರುವಂತಹ ತಾಲ್ಲೂಕುಗಳು. ಯಾವುದೇ, ಬೃಹತ್ ಕೈಗಾರಿಕೆ ಇಲ್ಲದಂತಹ ತಾಲ್ಲೂಕುಗಳು. ಇಡೀ ಜಿಲ್ಲೆಯಲ್ಲಿ ಯಾವುದೇ ಒಂದು ಬೃಹತ್ ಕೈಗಾರಿಕೆ ಇಲ್ಲ. ಬೃಹತ್ ನೀರಾವರಿ ಯೋಜನೆ ಇಲ್ಲ. ಅಥವಾ ಇನ್ನಾವುದೇ ರೀತಿಯಲ್ಲೂ ಮುಂದುವರಿಯುವಂತಹ ಅವಕಾಶ ಇಲ್ಲದೇ ಇರುವಂತಹ ಈ ನಾಲ್ಕು ತಾಲ್ಲೂಕನ್ನೂ ಒಂದು ಜಿಲ್ಲೆ ಮಾಡಿ ಬಿಟ್ಟಿದ್ದೀರಿ. ಹಾಗಾಗಿ ಈಗೇನು ನಮ್ಮ ಕೊಡಗಿನ ಮಾನ್ಯ ಶಾಸಕರು ಹೇಳುತ್ತಿದ್ದರು. ಅದನ್ನೇ ಪ್ರತಿಯೊಂದು ಹಂತದಲ್ಲೂ ಚಾಮರಾಜನಗರದವರು ಒತ್ತಾಯ ಮಾಡುವಂತಹ ಪರಿಸ್ಥಿತಿ ನಮ್ಮ ಭಾಗದ ಶಾಸಕರುಗಳಿಗೆ ನಿರ್ಮಾಣ ಆಗಿದೆ. ಆದ್ದರಿಂದ ಆಗಾಗ ಸರ್ಕಾರದ ಮಂತ್ರಿಗಳು, ಅಥವಾ ಉಸ್ತುವಾರಿ ಸಚಿವರಾದರೂ ನಮ್ಮಲ್ಲಿ ಬರಬೇಕು. ಕೊಡಗಿಗೆ ಅದೇ ಜಿಲ್ಲೆಯವರನ್ನು ಮೂರು ಜನ ಮಂತ್ರಿಗಳನ್ನಾಗಿ ಮಾಡಿದಿರಿ. ನಮ್ಮ ಜಿಲ್ಲೆಯಲ್ಲೂ ನಿಮ್ಮ ಪಕ್ಷದವರೇ ಇಬ್ಬರು ಗೆದ್ದಿದ್ದಾರೆ. ಒಬ್ಬರನ್ನು ಮಂತ್ರಿ ಮಾಡಿ ಜಿಲ್ಲಾ ಉಸ್ತುವಾರಿಗೆ ಕೊಟ್ಟಿದ್ದರೆ ಏನಾದರೂ ಸ್ವಲ್ಪ ಚುರುಕಾಗಿರುತ್ತಿತ್ತೇನೋ. ಅದನ್ನೂ ಮೈಗ್ರೇಟ್ ಮಾಡಿ ಹೊರಗಡೆಯಿಂದ ತೆಗೆದುಕೊಂಡು ನಮ್ಮ ಜಿಲ್ಲೆಗೆ ಒಬ್ಬ ಉಸ್ತುವಾರಿ ಸಚಿವರನ್ನು ನೇಮಕ ಮಾಡಿದಿರಿ. ಈಗ ನಮ್ಮ ಜಿಲ್ಲೆಯಲ್ಲಿ ದಿನ ಬೆಳಗಾದರೆ ಆ ಸಮಸ್ಯೆಗಳು ಏನು? ಉಸಿರು ಇರುವವರೆಗೆ ಆ ಜಿಲ್ಲೆಯಲ್ಲಿಯೇ ಕಾಲ ಕಳೆಯಬೇಕಾದಂತಹ ಜನರಿಗೆ ಒಂದು ಕಳಕಳಿ ಇರುತ್ತದೆ. ಆ ಕೆಲಸ ಕೂಡ ನಮ್ಮ ಘನ ಸರ್ಕಾರದವರು ಮಾಡಲಿಲ್ಲ ಎನ್ನುವುದು ಒಂದು ವಿಷಾದದ ವಿಚಾರ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೆ ನೀರಾವರಿ ಇಲ್ಲದೇ ಇರುವಂತಹ ಜಿಲ್ಲೆಗೆ ಕೊನೆಯ ಪಕ್ಷ ಅಂತರ್ಜಲದಿಂದಾದರೂ ಒಂದಷ್ಟು ವ್ಯವಸಾಯ ಮಾಡೋಣ ಎಂದರೆ ವಿದ್ಯುತ್ತಿನ ಸಮಸ್ಯೆ ಹೇಳುವುದಕ್ಕೆ ಅಸಾಧ್ಯ ಆಗಿದೆ.

ಇಡೀ ಜಿಲ್ಲೆಯಲ್ಲಿ ವಿದ್ಯುತ್ ಸಮಸ್ಯೆ ಬಹಳ ಆಗಾಧವಾಗಿದೆ. ದೊಡ್ಡರಾಯನ ಪೇಟೆಯಿಂದ ಚಾಮರಾಜನಗರದಲ್ಲಿ 220 ಕೆ.ವಿ. ಸಬ್ ಸ್ಟೇಷನ್ ಮಾಡಬೇಕೆಂದು ಒಂದು ಪ್ರಸ್ತಾಪ ಸರ್ಕಾರದ ಮುಂದೆ ಇದೆ. ಈವರೆಗೆ ಕಾರ್ಯಾರಂಭ ಮಾಡಿಲ್ಲ. ಮೈಸೂರು ಜಿಲ್ಲೆಯಿಂದ ಚಾಮರಾಜನಗರ ಜಿಲ್ಲೆಗೆ ವಿದ್ಯುತ್ ಬರಬೇಕು. ಅಲ್ಲಿಂದ ಸಬ್‌ಸ್ಟೇಷನ್ ಮುಖಾಂತರ ಸರ್ಕ್ಯೂಟ್ ಆಗಬೇಕು. ಅಲ್ಲಿ ಚಾಮರಾಜನಗರ ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳಿಗೆ ಆಗಾಗ ಕಲಹಗಳು ಆಗುತ್ತವೆ. ಯಾವುದೋ ಒಂದು ಲೈನ್‌ನಿಂದ ಚಾಮರಾಜ ನಗರದಿಂದ ಗುಂಡ್ಲುಪೇಟೆಗೆ ಬರುವುದನ್ನು ಅವರು ತಡೆಯುವುದು, ಗುಂಡ್ಲುಪೇಟೆಯಿಂದ ಚಾಮರಾಜನಗರಕ್ಕೆ ಹೋಗುತ್ತಿರುವ ವಿದ್ಯುತ್ತನ್ನು ಇವರು ತಡೆಯುವುದು. ಹೀಗಾಗಿ ನಮ್ಮ ನಮ್ಮಲ್ಲಿ ಘರ್ಷಣೆಗಳು ಉಂಟಾಗುವ ಪರಿಸ್ಥಿತಿ ಕೂಡ ಪ್ರಾರಂಭವಾಗಿದೆ. ಆದ್ದರಿಂದ ವಿದ್ಯುತ್ ಸಮಸ್ಯೆ ನೀಗಿಸುವುದಕ್ಕೆ ವಿಶೇಷವಾಗಿ ಈ ಸರ್ಕಾರ ಗಮನ ಕೊಡಬೇಕೆಂದು ನಾನು ಹೇಳುತ್ತಾ ಈ ವಿದ್ಯುತ್ ಇಲಾಖೆಯ ಬಗ್ಗೆ ಹೇಳಬೇಕೆಂದರೆ ವಿದ್ಯುತ್ ಪ್ರಸರಣ ನಿಗಮ ಎಂದು ಏನು ಮಾಡಿದ್ದೀರಿ, ನನ್ನ ದೃಷ್ಟಿಯಲ್ಲಿ ಸರ್ಕಾರಕ್ಕೆ ಇದರ ಮೇಲೆ ಯಾವುದೇ ಹಿಡಿತ ಇಲ್ಲ. ಅಲ್ಲಿರುವಂತಹ ಛೇರ್ಮನ್, ಚೀಫ್ ಇಂಜಿನಿಯರ್ ಟೆಕ್ನಿಕಲ್ ಮೆಂಬರ್ ಅವರುಗಳೇ ತಮ್ಮ ಸ್ವಇಚ್ಛೆಯಿಂದ ಆಡಳಿತ ನಡೆಸುತ್ತಾರೆಯೇ ಹೊರತು ಸರ್ಕಾರದ ಆದೇಶಗಳನ್ನು ಅವರು ಪಾಲಿಸುತ್ತಿಲ್ಲವೆಂದು ಅನೇಕ ನಿದರ್ಶನಗಳಿವೆ. ಮುಖ್ಯ ಮಂತ್ರಿಗಳಿಂದ ಹಿಡಿದು ಯಾವುದೇ ಮಂತ್ರಿಗಳು ಪತ್ರ ಬರೆದರೂ ಕೂಡ ಕೆಲಸ ಆಗುತ್ತಿಲ್ಲ. ಹಿಂದಿನ ರಾಜ್ಯ ಸಚಿವರು ಇಲ್ಲಿದ್ದರೆ ಕೇಳಬಹುದಾಗಿತ್ತು. ಅವರ ಪತ್ರಕ್ಕೆ ಯಾವುದಕ್ಕಾದರೂ ಬೋರ್ಡಿನಲ್ಲಿ ಮಾನ್ಯತೆ ಸಿಗುತ್ತಿದೆಯಾ ಎಂದು. ಈ ರೀತಿಯಲ್ಲಿ ಅವರು ಅವರದೇ ಆದ ಪ್ರಿಯಾರಿಟಿ ಇಟ್ಟುಕೊಂಡು ಅದರ ಪ್ರಕಾರ ಆಡಳಿತ ಮಾಡುತ್ತಿದ್ದಾರೆ. ಹಾಗಾಗಿ ಜನ ಪ್ರತಿನಿಧಿಗಳಿಗೆ ಕೆಪಿಟಿಸಿಎಲ್‌ನಿಂದ ಯಾವುದೇ ಮಾನ್ಯತೆ ಸಿಗುತ್ತಿಲ್ಲವೆಂದು ಈ ಸರ್ಕಾರಕ್ಕೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಅನೇಕ ಪವರ್ ಪ್ರಾಜೆಕ್ಟ್ ಸಬ್‌ಸ್ಟೇಷನ್ ಎನ್‌ಹ್ಯಾನ್ಸ್ ಮಾಡತಕ್ಕಂತಹ ಟಿಸಿ ಕೆಪ್ಯಾಸಿಟಿಗಳು 1997ರಲ್ಲಿ ಮಂಜೂರಾತಿ ಆಗಿದ್ದು ಇನ್ನೂ ಕೂಡ ಕಾರ್ಯಗತ ಆಗಿಲ್ಲ. ಅದನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಉಪಾಧ್ಯಕ್ಷರ ಮುಖಾಂತರ ಕೋರುತ್ತಾ, ಹೊಸದಾಗಿ ಚಾಮರಾಜನಗರ ಜಿಲ್ಲೆ ಆದ ಮೇಲೆ ಜಿಲ್ಲಾಧಿಕಾರಿಯವರನ್ನು ಚಾಮರಾಜನಗರದಲ್ಲಿ ಇಟ್ಟಿರಿ, ಆದರೆ ಕೊಳ್ಳೇಗಾಲ ಕೂಡ ಜಿಲ್ಲಾ ಕೇಂದ್ರ ಆಗಬೇಕೆಂದು ಅಲ್ಲಿಗೆ ಉಪ ವಿಭಾಗಾಧಿಕಾರಿ ಕಛೇರಿ ಶಿಫ್ಟ್ ಮಾಡಿದಿರಿ. ಆದರೆ ಗುಂಡ್ಲುಪೇಟೆ ಚಾಮರಾಜನಗರ ತಾಲ್ಲೂಕಿನವರು ಜಿಲ್ಲಾಧಿಕಾರಿ ಕಛೇರಿ ಚಾಮರಾಜನಗರಕ್ಕೆ ಬರುತ್ತಾರೆ. ಉಪ ವಿಭಾಗಾಧಿಕಾರಿ ಕೆಲಸ ಆಗಬೇಕಾದರೆ ಅಲ್ಲಿಂದ ಕೊಳ್ಳೇಗಾಲಕ್ಕೆ ಹೋಗಬೇಕು. ಅಲ್ಲಿಂದ ಉಪ ವಿಭಾಗಾಧಿಕಾರಿ ಕಛೇರಿಯನ್ನು ಚಾಮರಾಜನಗರದಲ್ಲಿ ಮಾಡಿದರೆ ಒಳ್ಳೆಯದು. ಅದಕ್ಕೆ ಸಂಬಂಧಪಟ್ಟಂತೆ ನಾನು ಒಂದು ಪ್ರಶ್ನೆ ಕೂಡ ಕಳುಹಿಸಿದ್ದೆ. ಈ ಬಗ್ಗೆ ಸರ್ಕಾರಕ್ಕೆ ಒತ್ತಾಯ ಏನಾದರೂ ಬರುತ್ತಿದೆಯಾ? ಮಾಡುವ ಉದ್ದೇಶ ಇದೆಯಾ? ಎಂದು ಕೇಳಿದ್ದಕ್ಕೆ ಯಾವುದೇ ಒತ್ತಾಯ ಬಂದಿಲ್ಲವೆಂದು ಲಿಖಿತ ಮೂಲಕ ನೀಡಿದ ಉತ್ತರದಲ್ಲಿ ಹೇಳಿದ್ದಾರೆ. ನಾನೇ ಹಿಂದೆ ಶಾಸಕನಾಗಿದ್ದ ಸಂದರ್ಭದಲ್ಲಿ ಅನೇಕ ಬಾರಿ ಆಗಿನ ಮುಖ್ಯಮಂತ್ರಿಗಳು ಮತ್ತು ಕಂದಾಯ ಸಚಿವರಿಗೆ ಒತ್ತಾಯ ತಂದಿರುತ್ತೇನೆ. ಮೈಸೂರು ವಿಭಾಗಾಧಿಕಾರಿಯವರು ಉಡುಪಿ ಮತ್ತು ಚಾಮರಾಜನಗರದಲ್ಲಿ ಎರಡು ಹೊಸ ಉಪ

ವಿಭಾಗಾಧಿಕಾರಿಗಳ ಕಛೇರಿಯನ್ನು ತೆರೆಯುವುದಕ್ಕೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. ಆದರೂ ನಮ್ಮ ಇಲಾಖೆ ಅಧಿಕಾರಿಗಳ ಉತ್ತರದಲ್ಲಿ ಆ ಪ್ರಸ್ತಾವನೆ ಇಲ್ಲ. ಆದಕ್ಕೆ ಯಾವ ಒತ್ತಾಯ ಬಂದಿಲ್ಲ ಎನ್ನುವ ವಿಚಾರ ಹೇಳಿದರು. ಅದೇನೋ ನನಗೆ ಗೊತ್ತಿಲ್ಲ. ಆದಷ್ಟು ಬೇಗ ಅಲ್ಲಿ ಉಪ ವಿಭಾಗಾಧಿಕಾರಿ ಕಛೇರಿ ಆದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯವೆಂದು ಈ ಸಂದರ್ಭದಲ್ಲಿ ತಿಳಿಸುತ್ತಾ, ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ಜಿಲ್ಲೆಗೆ ಆದರಲ್ಲೂ ವಿಶೇಷವಾಗಿ ಚಾಮರಾಜನಗರ ಮತ್ತು ಗುಂಡ್ಲುಪೇಟೆ ತಾಲ್ಲೂಕಿನ ಜನತೆಗೆ ಒಂದು ವರದಾನ ಎಂದರೆ, ಕಬಿನಿ 2ನೇ ಹಂತದ ಏತ ನೀರಾವರಿ. 1986ರಲ್ಲಿ ಇದಕ್ಕೆ ಆಡಳಿತ ಮತ್ತು ತಾಂತ್ರಿಕ ಮಂಜೂರಾತಿ ನೀಡಿ ಸರ್ಕಾರದವರು ಆಗಿನ ಕಾಲಕ್ಕೆ 390 ಕೋಟಿ ರೂಪಾಯಿ ವೆಚ್ಚದಲ್ಲಿ ಒಂದು ಅಂದಾಜು ತಯಾರು ಮಾಡಿದರು. ಸುಮಾರು 1.86 ಸಾವಿರ ಎಕರೆ ಅರೆ ನೀರಾವರಿ ಆಗುವ ಒಂದು ಯೋಜನೆ. ಇದನ್ನು ಈವರೆಗೆ ಕೈಗೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಹಿಂದೆ ನಾಗೇಗೌಡರು ನೀರಾವರಿ ಸಚಿವರಾಗಿದ್ದ ಸಂದರ್ಭದಲ್ಲಿ ಅದನ್ನು ರೀ ಸರ್ವೇ ಮಾಡಿಸಿ ಕೈಗೆತ್ತಿಕೊಳ್ಳಬೇಕೆಂದು ಪ್ರಯತ್ನ ಕೂಡ ನಡೆಸಿದರು. ಅಷ್ಟರಲ್ಲಿ ಚುನಾವಣೆ ಘೋಷಣೆಯಾಗಿದ್ದರಿಂದ ಮುಂದೆ ಏನಾಯಿತು ಎಂದು ಗೊತ್ತಿಲ್ಲ. 30-35 ಕಿಲೋಮೀಟರ್ ರೀಸರ್ವೆ ಮಾಡುವ ಕಾರ್ಯ ಮುಗಿದಿದೆ ಎಂದು ಕೇಳಿದ್ದೇನೆ. ಜಿಲ್ಲಾ ಉಸ್ತುವಾರಿ ಸಚಿವರಾದ ರೇಷ್ಮೆ ಖಾತೆ ಸಚಿವರಾದ ಮಹದೇವ್‌ರವರು ಮುಂದಿನ ಹಣಕಾಸು ವರ್ಷದಲ್ಲಿ ಕಬಿನಿ ಎರಡನೇ ಹಂತಕ್ಕೆ 50 ಕೋಟಿ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡುತ್ತೇವೆಂದು, ದೇವನೂರು ಮಠದಲ್ಲಿ ಸೇರಿದ ಜನಗಳ ಮುಂದೆ ಹೇಳಿ ಚಪ್ಪಾಳೆ ಹೊಡೆಸಿಕೊಂಡರು. ಬಡ್ಜೆಟ್ ಮಂಡನೆಯಾದಾಗ 50 ಕೋಟಿ ರೂಪಾಯಿ ಪ್ರಸ್ತಾಪ ಎಲ್ಲಾದರೂ ಕಾಣುತ್ತದೆ ಎಂದು ಹುಡುಕುತ್ತಿದ್ದೇವೆ. ಆದರೆ, ಎಲ್ಲೂ ಕಾಣಲಿಲ್ಲ. ಈ ರೀತಿ ಮಂತ್ರಿಗಳು ಸಭೆ ಸಮಾರಂಭಗಳಲ್ಲಿ ತಮಗೆ ತೋಚಿದ್ದನ್ನು ಹೇಳಿ ಜನರನ್ನು ತಪ್ಪು ದಾರಿಗೆ ಎಳೆಯತಕ್ಕಂತಹ ಕೆಲಸ ಮಾಡುವುದು ಅಷ್ಟು ಸೂಕ್ತವಾಗಲಾರದು ಎಂದು ಹೇಳಿ, ಈಗಲಾದರೂ ಸಪ್ಲಿಮೆಂಟರಿ ಬಡ್ಜೆಟ್‌ನಲ್ಲಿ ಮಾನ್ಯ ಕಂದಾಯ ಸಚಿವರು ನಮ್ಮ ಜಿಲ್ಲೆ ಕಡೆ ಗಮನ ಕೊಡಬೇಕು. ಸಪ್ಲಿಮೆಂಟರಿ ಬಡ್ಜೆಟ್‌ನಲ್ಲಾದರೂ ಈ ಯೋಜನೆಯನ್ನು ಜಿಲ್ಲಾ ಉಸ್ತುವಾರಿ ಸಚಿವರ ಪರವಾಗಿ ತಾವು ಆಸಕ್ತಿ ವಹಿಸಿ ಮಾಡಿಸಿಕೊಟ್ಟರೆ ನಿಮ್ಮ ಸರ್ಕಾರಕ್ಕೆ ನಾವು ದೊಡ್ಡ ಧನ್ಯವಾದಗಳನ್ನು ಸಲ್ಲಿಸುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹೊಸ ಜಿಲ್ಲೆಗಳ ಅಭಿವೃದ್ಧಿ ಬಗ್ಗೆ ತಾವು ಬಡ್ಜೆಟ್‌ನಲ್ಲಿ ಆಗಲಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಾಗಲಿ ಏನೂ ಪ್ರಸ್ತಾಪ ಮಾಡಲಿಲ್ಲ. ಯಾವುದೇ ಜಿಲ್ಲಾ ಕಛೇರಿಗಳು ಸ್ವಂತ ಕಟ್ಟಡಗಳು ಇಲ್ಲದೆ ಎಲ್ಲೆಲ್ಲೋ ಬಾಡಿಗೆ ಮನೆಗಳನ್ನು ತೆಗೆದುಕೊಂಡು ನಡೆಯುತ್ತಿವೆ. ಇದು ಮೊದಲು ತಾಲ್ಲೂಕು ಕೇಂದ್ರವಾಗಿದ್ದ ಊರು. ಅಲ್ಲಿ ಸಣ್ಣ ಸಣ್ಣ ಮನೆಗಳನ್ನು ಇಟ್ಟುಕೊಂಡಿದ್ದರು. ಅದರಲ್ಲಿ ಯಾವುದೇ ಕಛೇರಿಗಳು ಸಮರ್ಪಕವಾಗಿ ಕೆಲಸ ನಿರ್ವಹಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. 20 ಕೋಟಿ ರೂಪಾಯಿಗಳ ಬೃಹತ್ ಯೋಜನೆ ರೂಪಿಸಿ, ಸುಮಾರೂ 400 ರಿಂದ 500 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಮಾಸ್ಟರ್ ಪ್ಲಾನ್ ರಚನೆ ಮಾಡಿದರು. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಎರಡು ದಿನ ಅಲ್ಲಿ ಕ್ಯಾಂಪ್ ಮಾಡಿ ಇದನ್ನು ನಾವು ಬಹಳ ತ್ವರಿತ ಗತಿಯಿಂದ ಮಾಡುತ್ತೇವೆಂದು ಹೇಳಿದರು. ಆದರೆ ಇದರ ಬಗ್ಗೆ ಮುಂಗಡ ಪತ್ರದಲ್ಲಿ ಪ್ರಸ್ತಾಪ ಆಗಿರುವುದಿಲ್ಲ. ನಮ್ಮ ಜಿಲ್ಲೆಯಂತೆಯೇ ಉಳಿದ ಆರು ಜಿಲ್ಲೆಗಳ ಪರಿಸ್ಥಿತಿಯಾಗಿದೆ. ಆದ್ದರಿಂದ

ವಿಶೇಷವಾಗಿ ಕಂದಾಯ ಸಚಿವರು, ಮುಖ್ಯ ಮಂತ್ರಿಗಳ ಮೇಲೆ ಒತ್ತಡ ತಂದು ಹೊಸ ಜಿಲ್ಲೆಗಳಿಗೆ ಏನಾದರೂ ಒಂದು ಕಾಯಕಲ್ಪ ಮಾಡಿ, ಇಲ್ಲದಿದ್ದರೆ ಮತ್ತೆ ನಾವು ಮೈಸೂರು ಸಾಂಸ್ಕೃತಿಕ ರಾಜಧಾನಿ, ಅಠಾರ ಕಛೇರಿ, ಹಿಂದೆ ಮಹಾರಾಜರು ಕಟ್ಟಿದ ಕಟ್ಟಡಗಳಲ್ಲಿ ಕೆಲಸ ಮಾಡಿಸಿಕೊಂಡಿದ್ದೇವೆ. ಚಾಮರಾಜನಗರಕ್ಕೆ ಹೋಗಿ ಒಂದು ಕಛೇರಿಗೆ ಹೋಗಬೇಕಾದರೆ ಬಹಳ ವ್ಯಥೆ ಆಗುತ್ತದೆ. ಈ ಪರಿಸ್ಥಿತಿ ಇವತ್ತು ನಮ್ಮ ಜಿಲ್ಲೆಯಲ್ಲಿದೆ. ಬಹುಶಃ ಈ ಅವಧಿಯಲ್ಲಾದರೂ ನಾವು ಹೊಸ ಕಟ್ಟಡದಲ್ಲಿ ಹೋಗಿ ಕುಳಿತುಕೊಳ್ಳಲು ವ್ಯವಸ್ಥೆ ಮಾಡುತ್ತೀರೆಂದು ಹೇಳುತ್ತೇನೆ. ನಮ್ಮದು ಗಡಿ ತಾಲ್ಲೂಕು. ಈಗ ಏನೋ ಗಡಿ ಅಭಿವೃದ್ಧಿ ಮಂಡಳಿ ಮಾಡಿ ವಾಟಾಳ್ ನಾಗರಾಜ್‌ರವರಿಗೆ ಅಧ್ಯಕ್ಷರಾಗಿ ಮಾಡಿ ಗಡಿ ಸಮಸ್ಯೆ ಬಗ್ಗೆ ಅಧ್ಯಯನ ಮಾಡಿ ಎಂದು ಹೇಳಿದ್ದೀರಿ ಸಂತೋಷ. ಅದೇ ರೀತಿ ಗಡಿ ಪ್ರದೇಶದ ಅಭಿವೃದ್ಧಿಗೆ ಹೆಚ್ಚಿನ ಹಣ ಬಿಡುಗಡೆ ಮಾಡಬೇಕು. ರಾಜ್ಯ ಸರ್ಕಾರದಲ್ಲಿ ಬಾರ್ಡರ್ ಏರಿಯಾ ಡೆವಲಪ್‌ಮೆಂಟ್ ಪ್ರೋಗ್ರಾಂ ಎಂದು ಒಂದು ಯೋಜನೆ ಇದೆ. ಅದಕ್ಕೆ ಒಂದು ಕ್ಷೇತ್ರಕ್ಕೆ, ಒಂದು ವರ್ಷಕ್ಕೆ ಎರಡು ಲಕ್ಷ, ಮೂರು ಲಕ್ಷ ರೂಪಾಯಿಗಳನ್ನು ಕೊಡುತ್ತೀರಿ. ನಾವು ಜಿಲ್ಲಾಪರಿಷತ್ ಚೀಫ್ ಆಫೀಸರ್ ಹತ್ತಿರ ಮೂರು ಲಕ್ಷ ರೂಪಾಯಿ ಕೆಲಸಕ್ಕೆ ಮಂಜೂರಾತಿ ತೆಗೆದುಕೊಳ್ಳುವುದು ದೊಡ್ಡ ಕೆಲಸವೇನಲ್ಲ. ಆದರೆ ಸರ್ಕಾರ ಕನಿಷ್ಟ 15-20 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಗಡಿ ಭಾಗದಲ್ಲಿ ರಸ್ತೆ, ಶಾಲೆಗಳು, ಅಂಗನವಾಡಿ ಕೇಂದ್ರ ಮತ್ತು ಮನೆಗಳ ಯೋಜನೆ ಕೈಗೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ನಾವು ಪ್ರತ್ಯೇಕವಾಗಿ ಅನೇಕ ಮಂಡಳಿಗಳನ್ನು ಮತ್ತು ಸಮಿತಿಗಳನ್ನು ರಚನೆ ಮಾಡುತ್ತಿದ್ದೇವೆ. ಹಾಗೆಯೇ ಗಡಿ ಅಭಿವೃದ್ಧಿ ಮಂಡಳಿಯನ್ನು ಮಾಡುವುದು ಉತ್ತಮ. ರಸ್ತೆ, ಗಡಿ ಅಭಿವೃದ್ಧಿ ಮಂಡಳಿ ರಚನೆ ಮಾಡಿ ಅದಕ್ಕೆ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿದರೆ ಅವರ ಒತ್ತಾಯದಿಂದ ಹೆಚ್ಚಿನ ಅನುದಾನ ಬಂದು, ನಮ್ಮ ಗಡಿ ಭಾಗದ ಕೆಲಸ ಕಾರ್ಯಗಳು ಆಗುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ. ಗಡಿ ಪ್ರದೇಶ ಅಭಿವೃದ್ಧಿ ಮಂಡಳಿ ರಚನೆ ಮಾಡಬೇಕೆಂದು ಹೇಳಿ, 1997-98 ರಲ್ಲಿ ಆ್ಯಕ್ಷನ್ ಪ್ಲಾನ್ ಮಾಡಬೇಕೆಂದು ಹೇಳಿದ್ದರು. ಇದೂ ಕೂಡ ಮಲೆನಾಡು ಅಭಿವೃದ್ಧಿ ಮಂಡಲಿ ವ್ಯಾಪ್ತಿಗೆ ಬರುತ್ತದೆ. ಮೂರು ವರ್ಷಗಳಿಂದ ಸ್ಪಿಲ್ ಓವರ್ ವರ್ಕ್ ಪೆಂಡಿಂಗ್ ಬಿಲ್ ಇದೆ. 2-3 ವರ್ಷಗಳಿಂದ ಹೊಸ ಕಾರ್ಯಕ್ರಮಗಳನ್ನು ಕೇಳಲಿಲ್ಲ. ಈ ವರ್ಷವೂ ಕೂಡ ಕೇಳಲಿಲ್ಲ. ಮಲೆನಾಡು ಅಭಿವೃದ್ಧಿ ಮಂಡಲಿ ಏನು ಕೆಲಸ ಮಾಡುತ್ತಿದೆ ಮತ್ತು ಅದು ಅಸ್ತಿತ್ವದಲ್ಲಿ ಇದೆಯೋ ಇಲ್ಲವೋ ಎನ್ನುವುದನ್ನು ಆ ಭಾಗದ ಶಾಸಕರಿಗೆ ಒಂದು ಪ್ರಶ್ನೆಯಾಗಿ ಉಳಿದಿದೆ. ಶಿವಮೊಗ್ಗದಲ್ಲಿ ದೊಡ್ಡ ಕೇಂದ್ರ ಕಛೇರಿ ಬೇರೆ ಉದ್ಘಾಟನೆಯಾಯಿತು. ತಮ್ಮ ಪಕ್ಷದ ಸದಸ್ಯರು 135 ಜನ ಇದ್ದರೂ ಸಹ ಅದರ ಜೊತೆಗೆ ಇನ್ನೂ 10 ಜನರನ್ನು ಸೇರಿಸಿಕೊಂಡು 151 ಜನ ಇದ್ದು ಬಲಿಷ್ಟ ಸರ್ಕಾರ ಇಟ್ಟುಕೊಂಡು ಆಡಳಿತ ಮಾಡುವಂತಹ ಸಂದರ್ಭದಲ್ಲಿ ಇಂತಹ ಕ್ಷೇತ್ರಗಳಿಗೆ ತಾವು ವಿಶೇಷ ಗಮನ ಕೊಡಬೇಕು. ತಾವು ಮಲೆನಾಡು ಅಭಿವೃದ್ಧಿ ಮಂಡಲಿಗೆ ಹೆಚ್ಚು ಒಲವು ತೋರಿಸಬೇಕು. ನಮಗೆ ಹೊಸ ಕಾರ್ಯಕ್ರಮಗಳಿಗೆ ಹಣ ಬೇಡ. ಈಗ ಏನು ಪೆಂಡಿಂಗ್ ಬಿಲ್ಸ್ ಮತ್ತು ಸ್ಪಿಲ್‌ಓವರ್ ವರ್ಕ್ಸ್ ಇವೆ ಅದಕ್ಕೆ 5-6 ಕೋಟಿ ರೂಪಾಯಿಗಳನ್ನು ಬೇಗ ಬಿಡುಗಡೆ ಮಾಡಿಸಿದರೆ ಅವರು ಕೆಲಸ ಮಾಡುತ್ತಾರೆ. ಹೇಗೋ ಉಸಿರಾಡಿಕೊಳ್ಳುತ್ತಾರೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು 25 ಲಕ್ಷ ರೂಪಾಯಿಗಳ ಪೆಂಡಿಂಗ್ ಬಿಲ್ಸ್ ಎಂಎಡಿಪಿಯಲ್ಲಿ

ಉಳಿದುಕೊಂಡಿವೆ. ಅದನ್ನು ಕೇಳುವುದರ ಜೊತೆಗೆ ಹೊಸ ಕಾರ್ಯಕ್ರಮ ಕೇಳತಕ್ಕಂಥ ವ್ಯವಸ್ಥೆ ಕೂಡ ತಾವು ಮಾಡಬೇಕೆಂದು ಹೇಳಿ, ಈ ಸಂದರ್ಭದಲ್ಲಿ ನಾನು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ನಮ್ಮಲ್ಲಿ ಅರಣ್ಯ ಪ್ರದೇಶ ಸಾಕಷ್ಟು ಇದೆ. ನಮ್ಮಲ್ಲಿ ಒಂದು ಫಾರೆಸ್ಟ್ ರೀಸರ್ಚ್ ಸೆಂಟರ್ ಮಾಡಬೇಕು. ಅದಕ್ಕೆ ಜಾಗ ಕೊಡಿಸಿ ಎಂದು ಹಿಂದಿನ ಕನ್‌ಸರ್‌ವೇಟರ್ ಪ್ರಸ್ತಾಪ ಮಾಡಿದ್ದರು. ಇವರು ಏನೋ ಒಂದು ಒಳ್ಳೆಯ ಕೆಲಸ ಮಾಡುತ್ತಿದ್ದಾರೆಂದು ನಾವು ಪಶುಸಂಗೋಪನಾ ಇಲಾಖೆಗೆ ಸೇರಿದ 250 ಎಕರೆ ಜಾಗವನ್ನು ಅರಣ್ಯ ಇಲಾಖೆಗೆ ವಹಿಸಿಕೊಟ್ಟೆವು. ಅದರ ಬಗ್ಗೆ ನಾನು ಈ ಸದನದಲ್ಲಿ ಒಂದು ಪ್ರಶ್ನೆಯನ್ನು ಕೇಳಿದರೆ, ಆ ಜಾಗವನ್ನು ಅರಣ್ಯ ಇಲಾಖೆಗೆ ವಹಿಸಿಕೊಟ್ಟಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ನಮ್ಮ ಸೆಕ್ರೆಟರಿಯೇಟ್‌ನಲ್ಲಿ ಕಾರ್ಯದರ್ಶಿಗಳು, ಮಂತ್ರಿಗಳಿಗೆ ಉತ್ತರ ಕಳುಹಿಸಿಕೊಡುವಾಗ ಎಷ್ಟು ಬೇಜವಾಬ್ದಾರಿಯಿಂದ ಕಳುಹಿಸಿಕೊಡುತ್ತಾರೆ ಎನ್ನುವುದಕ್ಕೆ ಇದೊಂದು ಉದಾಹರಣೆ. ನಾನು ಆ ಬಗ್ಗೆ ದಾಖಲಾತಿಗಳನ್ನು ಕಳುಹಿಸಿಕೊಡಿ ಅಂದರೆ ಕಳುಹಿಸಿಕೊಡುತ್ತೇನೆ. ಅಲ್ಲಿನ ಜಿಲ್ಲಾ ಪರಿಷತ್ತು ಚೀಪ್ ಸೆಕ್ರೆಟರಿ, ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಜಾಯಿಂಟ್ ಆಗಿ ಹೋಗಿ ಸ್ಪಾಟ್ ಇನ್ಸ್‌ಪೆಕ್ಷನ್ ಮಾಡಿ 250 ಎಕರೆ ಜಾಗವನ್ನು ಅರಣ್ಯ ಇಲಾಖೆಗೆ ವಹಿಸಿಕೊಟ್ಟೆವು. ಅದರ ಬಗ್ಗೆ ನಾನು ಈ ಸದನದಲ್ಲಿ ಒಂದು ಪ್ರಶ್ನೆಯನ್ನು ಕೇಳಿದರೆ, ಆ ಜಾಗವನ್ನು ಅರಣ್ಯ ಇಲಾಖೆಗೆ ವಹಿಸಿಕೊಟ್ಟಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ನಮ್ಮ ಸೆಕ್ರೆಟರಿಯೇಟ್‌ನಲ್ಲಿ ಕಾರ್ಯದರ್ಶಿಗಳು, ಮಂತ್ರಿಗಳಿಗೆ ಉತ್ತರ ಕಳುಹಿಸಿಕೊಡುವಾಗ ಎಷ್ಟು ಬೇಜವಾಬ್ದಾರಿಯಿಂದ ಕಳುಹಿಸಿಕೊಡುತ್ತಾರೆ ಎನ್ನುವುದಕ್ಕೆ ಇದೊಂದು ಉದಾಹರಣೆ. ನಾನು ಆ ಬಗ್ಗೆ ದಾಖಲಾತಿಗಳನ್ನು ಕಳುಹಿಸಿಕೊಡಿ ಅಂದರೆ ಕಳುಹಿಸಿಕೊಡುತ್ತೇನೆ. ಅಲ್ಲಿನ ಜಿಲ್ಲಾ ಪರಿಷತ್ತು ಚೀಪ್ ಸೆಕ್ರೆಟರಿ, ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಜಾಯಿಂಟ್ ಆಗಿ ಹೋಗಿ ಸ್ಪಾಟ್ ಇನ್ಸ್‌ಪೆಕ್ಷನ್ ಮಾಡಿ 250 ಎಕರೆ ಜಾಗವನ್ನು ಕೊಟ್ಟಿದ್ದರೂ ಸಹ ಅರಣ್ಯ ಇಲಾಖೆಯವರು ಅಲ್ಲಿ ಪ್ಲಾಂಟೇಷನ್ ಸಹ ಮಾಡುತ್ತಿಲ್ಲ. ರೀಸರ್ಚ್ ಸೆಂಟರ್ ಸಹ ಮಾಡುತ್ತಿಲ್ಲ. ಅಲ್ಲಿನ ಕೆಲವು ಜನ ರೈತರು ಉಳುವೆ ಮಾಡಿಕೊಂಡು ತಮ್ಮ ವ್ಯಾಪ್ತಿಯಲ್ಲಿ ಬಳಸಿಕೊಳ್ಳುತ್ತಿದ್ದಾರೆ. ಈ ಬಗ್ಗೆ ನಾನು ಪ್ರಶ್ನೆ ಕೇಳಿದರೆ ಅದಕ್ಕೆ ಸಮರ್ಪಕವಾಗಿ ಉತ್ತರ ಕೊಟ್ಟಿಲ್ಲ. ನಾನು ಕಳೆದ 5 ವರ್ಷಗಳಿಂದ ಈ ಸದನದ ಸದಸ್ಯನಾಗಿದ್ದರೂ ಸಹ ನಾನು ಇಷ್ಟು ದೀರ್ಘವಾಗಿ ಮಾತನಾಡುವುದಕ್ಕೆ ಸಾಧ್ಯವಾಗಿಲ್ಲ. ನನ್ನ ಕ್ಷೇತ್ರವನ್ನು ಹಿಂದೆ ಪ್ರತಿನಿಧಿಸುತ್ತಿದ್ದ ಶ್ರೀಮತಿ ನಾಗರತ್ನಮ್ಮನವರು ಬಹಳ ದೀರ್ಘಕಾಲ ಈ ಶಾಸನ ಸಭೆಯ ಅಧ್ಯಕ್ಷರಾಗಿ, ಮಂತ್ರಿಗಳಾಗಿ ವಿರೋಧಪಕ್ಷದ ಶಾಸಕರಾಗಿ ಕೆಲಸ ಮಾಡಿದ್ದಾರೆ. ಅದೇ ರೀತಿಯಲ್ಲಿ ರಾಷ್ಟ್ರದಲ್ಲಿಯೇ ನೀರ್ ಸಾಬರು ಅಂತ ಖ್ಯಾತಿಯನ್ನು ಪಡೆದಂತಹ ದಿವಂಗತ ಶ್ರೀ ಅಬ್ದುಲ್‌ನಜೀರ್ ಸಾಬ್‌ರವರು ನನ್ನ ರಾಜಕೀಯ ಗುರುಗಳು. ಕರ್ನಾಟಕ ರಾಜ್ಯದಲ್ಲಿ ಇವತ್ತು ಏನು ಪಂಚಾಯತಿ ವ್ಯವಸ್ಥೆಯ ಮೂಲಕ ಅಧಿಕಾರ ವಿಕೇಂದ್ರೀಕರಣ ಆಗಿದೆ ಅದಕ್ಕಾಗಿ ಅವರು ತಮ್ಮ ಜೀವನವನ್ನೇ ಸಮರ್ಪಣೆ ಮಾಡಿಕೊಂಡಿದ್ದಾರೆ. ನಾನು ಮಾನ್ಯಕಾಗೋಡು ತಿಮ್ಮಪ್ಪನವರ ಗಮನಕ್ಕೆ ಒಂದು ವಿಚಾರವನ್ನು ತರುವುದೇನೆಂದರೆ, ಅವರ ಕೊನೆ ಗಳಿಗೆಯಲ್ಲಿ, ಅವರ ಜೀವ ಹೋಗುತ್ತಿದೆ ಎನ್ನುವ ಸಂದರ್ಭದಲ್ಲಿ ನಾನು ಅವರ ಬಳಿ ಇದ್ದೆ. ಅವರು ಬಹಳ ನೊಂದು ನಾನು ಜನಕ್ಕೆ ನೀರು ಕೊಟ್ಟೆ, ಆದರೆ ಸೂರು ಕೊಡುವುದಕ್ಕೆ ಆಗಲಿಲ್ಲ ಎನ್ನುವಂತಹ ಮಾತನ್ನು ಹೇಳಿದ್ದರು. ಕೊನೆಯ ಪಕ್ಷ ಅವರ ಹುಟ್ಟೂರಿನಲ್ಲಿಯಾದರೂ ಸೂರು ಕೊಡೋಣ ಅಂತ ಹೇಳಿ ಈ ನೆರಳು ಭಾಗ್ಯ ಯೋಜನೆಯಡಿಯಲ್ಲಿ ನಮ್ಮ ಗುಂಡ್ಲುಪೇಟೆ

ತಾಲ್ಲೂಕಿನಲ್ಲಿ ಹಾಕಿಕೊಂಡು ಸುಮಾರೂ 5 ಸಾವಿರ ಜನ ಗುಡಿಸಿಲಿನಲ್ಲಿ ವಾಸ ಮಾಡುವಂತಹ ಜನಕ್ಕೆ ಮೇಲ್ಛಾವಣಿ ಹೊಂದಿರುವಂತಹ ಒಂದು ಯೋಜನೆಯನ್ನು ತಯಾರು ಮಾಡಿದರು. 25-30 ರೂಪಾಯಿಗಳನ್ನು ಹಿಂದಿನ ಸರ್ಕಾರದ ಮಾನ್ಯ ಹಣಕಾಸಿನ ಸಚಿವರಾಗಿದ್ದಂತಹ ಸಿದ್ದರಾಮಯ್ಯನವರು ಕೊಟ್ಟಿದ್ದಾರೆ. ಈ ಯೋಜನೆಯನ್ನು ತಾವು ಸಹ ಮುಂದುವರಿಸಬೇಕೆಂದು ಹೇಳಿ, ಕಾರಣ ತಾವು ಕೂಡ ಅವರ ಒಬ್ಬ ಅಭಿಮಾನಿಯಾಗಿದ್ದವರು. ಆ ಯೋಜನೆಯನ್ನು ಕಾರ್ಯಗತ ಮಾಡಿಸಿಕೊಟ್ಟು ಕೊನೆಯ ಪಕ್ಷ ನಮ್ಮ ತಾಲ್ಲೂಕಿನಲ್ಲಿರತಕ್ಕಂಥ ಗುಡಿಸಲುಗಳನ್ನು ಹೋಗಲಾಡಿಸಿ ಗುಂಡ್ಲುಪೇಟೆ ಪಟ್ಟಣವನ್ನಾಗಿ ಮಾಡಬೇಕೆನ್ನುವ ಪಣ ತೊಟ್ಟಿದ್ದೇನೆ. ಅದಕ್ಕೆ ನಮ್ಮ ಸರ್ಕಾರ ಸಾಕಷ್ಟು ಉತ್ತೇಜನವನ್ನು ಕೊಟ್ಟು ಹಣಕಾಸಿನ ನೆರವು ನೀಡಬೇಕೆಂದು ಹೇಳಿ ನಾನು ಮಾನ್ಯ ದಿವಂಗತ ನಜೀರ್‌ಸಾಬ್ ಮತ್ತು ನಾಗರತ್ನಮ್ಮನವರನ್ನು ನೆನೆಸುತ್ತಾ ನನಗೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಜೆ.ಡಿ. ನಾರಾಯಣಪ್ಪ (ಹೊಸನಗರ): ಮಾನ್ಯ ಅಧ್ಯಕ್ಷರೇ, ಜಂಟೀಅಧಿವೇಶನ ಸಂದರ್ಭದಲ್ಲಿ ರಾಜ್ಯಪಾಲರು ಮಾಡಿರತಕ್ಕಂಥ ಭಾಷಣದ ಬಗ್ಗೆ ವಂದನಾ ನಿರ್ಣಯಕ್ಕೆ ವಂದನೆಗಳನ್ನು ಸಲ್ಲಿಸಲು ನನಗೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಕೆಲವೇ ಮಾತುಗಳನ್ನು ಮುಗಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಇರುವ ಈ ಸರ್ಕಾರದಲ್ಲಿ ಸಾಕಷ್ಟು ವಿಷಯಗಳಿಗೆ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ, ಕುಡಿಯುವ ನೀರಿನ ವ್ಯವಸ್ಥೆ ಆರೋಗ್ಯ, ಶಿಕ್ಷಣ, ಸಮಾಜ ಕಲ್ಯಾಣ ಇತ್ಯಾದಿ ಎಲ್ಲಾ ವಿಚಾರಗಳಿಗೂ ಹೆಚ್ಚು ಒತ್ತು ಕೊಟ್ಟು, ಜನಸಾಮಾನ್ಯರಿಗೆ ಅನುಕೂಲವಾಗತಕ್ಕಂಥ ವಿಚಾರದಲ್ಲಿ, ಒಳ್ಳೆಯ ವಿಷಯಗಳನ್ನು ಇಲ್ಲಿ ಹೇಳಿದ್ದಾರೆ. ನಾನು ಆರೋಗ್ಯ ಇಲಾಖೆ ಬಗ್ಗೆ ಹೇಳುವುದಾದರೆ ಆರೋಗ್ಯ ಇಲಾಖೆಯಲ್ಲಿ ಡಾಕ್ಟರ್ಸ್ ಕೊರತೆ ಮತ್ತು ಸಣ್ಣ ಪುಟ್ಟ ಕೊರತೆಗಳನ್ನು ನೋಡುತ್ತಿದ್ದೇವೆ. ಅವುಗಳನ್ನು ಸುಧಾರಿಸಬೇಕು, ಚಿನ್ನಾಗಿ ಮಾಡಬೇಕು. ಮಲೆನಾಡು ಭಾಗದಲ್ಲಿ ನಮ್ಮ ಶಿವಮೊಗ್ಗ ಜಿಲ್ಲೆಯ ಮೆಗ್ಗಾನ್ ಆಸ್ಪತ್ರೆ ಕೆಲಸ ಬಹಳ ನಿಧಾನವಾಗುತ್ತಿದೆ. ಅದನ್ನು ಚುರುಕುಗೊಳಿಸಬೇಕು.

ಇನ್ನು ಗುಡಿಕೈಗಾರಿಕೆಗಳಿಗೆ ಹೆಚ್ಚು ಒತ್ತು ಕೊಡಬೇಕೆನ್ನುವ ವಿಚಾರವನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಅದೇ ರೀತಿಯಲ್ಲಿ ರಸ್ತೆಗಳ ವಿಚಾರ. ಈಗ ನಮ್ಮ ಮಲೆನಾಡು ಭಾಗದ ಮಿತ್ರರಾದ ಕೊಡಗು ಶಾಸಕರು ರಸ್ತೆಗಳ ಬಗ್ಗೆ ಹೇಳಿದರು. ಮಲೆನಾಡು ಪ್ರದೇಶದಲ್ಲಿ ಮಳೆ ಜಾಸ್ತಿ ಬೀಳುವುದರಿಂದ ರಸ್ತೆಗಳು ಹಾಳಾಗುತ್ತಿವೆ ಎನ್ನತಕ್ಕಂಥ ವಿಚಾರ. ಮಲೆನಾಡು ಪ್ರದೇಶದ ರಸ್ತೆಗಳಲ್ಲಿ ವಾಹನಗಳು ಸಹ ಹೆಚ್ಚು ಓಡಾಡುತ್ತವೆ. ಈ ರಸ್ತೆಗಳ ವಿಚಾರದಲ್ಲಿ ಒಂದು ಹೊಸ ಟೆಕ್ನಾಲಜಿಯನ್ನು ಕಂಡು ಹಿಡಿಯಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ವಿದ್ಯುಚ್ಛಕ್ತಿ ವಿಚಾರದಲ್ಲಿ ಹೇಳುವುದಾದರೆ ನನ್ನ ಕ್ಷೇತ್ರದಲ್ಲಿ ಜನ ವಸತಿಯನ್ನು ಕಳೆದುಕೊಂಡು, ಬೇರೆ ಕಡೆ ಹೋಗಿದ್ದು ಇನ್ನೂ ಕತ್ತಲಲ್ಲಿಯೇ ಇದ್ದಾರೆ. ಅವರು ವಿದ್ಯುಚ್ಛಕ್ತಿ ಉತ್ಪಾದನೆಗೆ ಜಮೀನು ಕೊಟ್ಟರು. ಅವರಿಗೆ ಬೆಳಕು ಮಾತ್ರ ಇಲ್ಲ. ದೀಪದ ಬುಡ ಯಾವಾಗಲೂ ಕತ್ತಲು ಎನ್ನುವ ಹಾಗೆ ಬಹಳಷ್ಟು ಹಳ್ಳಿಗಳಿಗೆ ಇನ್ನು ವಿದ್ಯುತ್ ಇಲ್ಲ. ಈ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅಲ್ಲಿ ಜನ ಜಮೀನು ಮತ್ತು ಮನೆ ಕಳೆದುಕೊಂಡು,

ವಿದ್ಯಾವಂತರು ಸಹ ನಿರುದ್ಯೋಗಿಗಳಾಗಿರುವಂತಹ ಸಂದರ್ಭ ಇದೆ. ವಿದ್ಯಾವಂತ ಯುವಕರಿಗೆ ಜೀವನ ಮಾಡುವುದಕ್ಕೆ ಸರ್ಕಾರ ಒಂದು ಅವಕಾಶವನ್ನು ಮಾಡಿಕೊಡಬೇಕೆಂದು ಹೇಳುತ್ತಾ, ನಮ್ಮ ಭಾಗದ ಜನ ಜಮೀನು ಕಳೆದುಕೊಂಡು, ಮನೆ ಕಳೆದುಕೊಂಡು ಕಾಡಿನಲ್ಲಿ ಹೋಗಿ ಏನು ಜಮೀನು ಮಾಡಿಕೊಂಡು ಬಗರ್ ಹುಕ್ಕುಂ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಅದನ್ನು ಸಕ್ರಮಗೊಳಿಸುವ ಬಗ್ಗೆ ಸಹ ಸರ್ಕಾರ ಗಮನಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಹಾಲಿ ಈಗ ಶಿವಮೊಗ್ಗ ಜಿಲ್ಲೆಯ ತುಂಗಾ ಏತನೀರಾವರಿ ಯೋಜನೆ ಮತ್ತು ಮೇಲ್ದಂಡೆ ಯೋಜನೆಗಳ ಕೆಲಸ ಬಹಳ ನಿಧಾನವಾಗುತ್ತಿದೆ. ಆದಷ್ಟು ಬೇಗ ಈ ಕೆಲಸ ಮುಗಿಸಿ ಆ ಭಾಗದ ಜನರು ಆ ಜಾಗದಲ್ಲಿ ಬೆಳೆ ಬೆಳೆದು ಜೀವನ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ, ಈ ರಾಜ್ಯಪಾಲರ ಭಾಷಣದಲ್ಲಿ ಇಂತಹ ಹತ್ತು ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಲಾಗಿದೆ. ಆ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಮತ್ತು ಈ ಸದನದಲ್ಲಿ ಇದುವರೆಗೂ ಯಾವ ರಾಜ್ಯಪಾಲರೂ ಕನ್ನಡದಲ್ಲಿ ಭಾಷಣ ಮಾಡಿರಲಿಲ್ಲ.

ಮಾನ್ಯ ರಾಜ್ಯಪಾಲರು ಕನ್ನಡದಲ್ಲಿ ಭಾಷಣ ಮಾಡಿದ್ದಾರೆ ಎನ್ನತಕ್ಕಂಥ ವಿಚಾರವನ್ನು ಹೇಳಿದರು. ಇದು ನಿಜವಾಗಿಯೂ ಕೂಡ ಸಂತೋಷ ಪಡತಕ್ಕ ವಿಚಾರವಾಗಿದೆ. ಮಾನ್ಯ ರಾಜ್ಯಪಾಲರು ಅವರ ಮಾತೃಭಾಷೆಯಷ್ಟೇ ನಿರರ್ಗಳವಾಗಿ ಇಲ್ಲಿ ಭಾಷಣವನ್ನು ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಬಹಳಷ್ಟು ಜನ ಹೊಸ ಸದಸ್ಯರು ಈ ವಿಧಾನ ಸಭೆಗೆ ಆರಿಸಿ ಬಂದಿದ್ದೇವೆ. ನಮಗೆ ವಿಧಾನ ಸಭೆ ಹೊಸದು. ಇಲ್ಲಿ ನಾವು ಕಲಿಯಬೇಕಾದಂತಹ ವಿಚಾರ ಬಹಳಷ್ಟು ಇದೆ. ಇಲ್ಲಿ ಬಹಳಷ್ಟು ಹಿರಿಯ ಸದಸ್ಯರಿದ್ದಾರೆ. ಅನುಭವಸ್ಥರಿದ್ದಾರೆ. ನನಗೆ ಈಗ ಒಂದು ಉದಾಹರಣೆ ನೆನಪಿಗೆ ಬರುತ್ತಿದೆ. ಒಬ್ಬ ಸ್ನೇಹಿತ ಒಂದು ಮನೆಗೆ ಊಟಕ್ಕೆ ಹೋದನಂತೆ. ಸ್ನೇಹಿತನಿಗೆ ಊಟಕ್ಕೆ ಹಾಗಿ ತಾನೂ ಕೂಡ ಜೊತೆಗೆ ಕುಳಿತುಕೊಂಡು ಊಟ ಮಾಡಬೇಕಾದರೆ, ಆ ಮನೆಯವನು ತನ್ನ ಹೆಂಡತಿಯನ್ನು ಒಂದು ಶಬ್ದ ಉಪಯೋಗಿಸಿ 'ಬಾ ಇಲ್ಲಿ, ಸ್ವಲ್ಪ ಸಾರು ಹಾಕು' ಎಂದನಂತೆ. ಅದು ಒಂದು ಕೆಟ್ಟ ಶಬ್ದ. ಈ ಸ್ನೇಹಿತನಿಗೂ ಕೂಡ ಸಾರು ಬೇಕಾಗಿತ್ತು. ಅವನೂ ಕೂಡ ಅದೇ ಶಬ್ದವನ್ನು ಉಪಯೋಗಿಸಿ ತನಗೂ ಸಾರು ಹಾಕುವಂತೆ ಕೇಳಿದನಂತೆ. ಅವನು ಅದೇ ಹೆಸರು ಎಂದು ತಿಳಿದುಕೊಂಡನೋ ಏನೋ. ಆ ಒಂದು ಅನುಭವ ಇವತ್ತು ನಮಗಾಗುತ್ತಿದೆ. ನಾವು ಹೀಗೆಯೇ ಈ ತರಹವೇ ಮುಂದುವರೆಯಬೇಕೇ? ಅದು ಏನೇ ಇರಲಿ, ನಾವು ಕೇಳತಕ್ಕದ್ದು ಒಂದೇ. ಯಾವ ತರಹದಲ್ಲಿ ಹಿಂದಿನ ಸರ್ಕಾರಗಳು ನಡೆದವು, ಹಿಂದಿನ ವಿಚಾರಗಳು ಹೇಗಾಯಿತು ಎನ್ನುವುದು ಮುಖ್ಯವಲ್ಲ. ಹಿಂದೆ ಒಂದು ಗಲಾಟೆ ನಡೆಯಿತು. ಗಲಾಟೆಯಲ್ಲಿ ಏನಾಯಿತು ಎಂದರೆ, ಅವರು ನಮಗೆ ಹೊಡೆದರು, ನಮಗೆ ಅವರು ಹೊಡೆದರು. ಈ ಪರಿಸ್ಥಿತಿ ಬೇಡ. ಈಗ ಬಂದಿರತಕ್ಕಂಥದ್ದರಲ್ಲಿ ಎಲ್ಲರೂ ಸಹಕರಿಸಿ, ಸುಧಾರಿಸಿದ ಆಡಳಿತ ಅಥವಾ ಒಳ್ಳೆಯ ವಿಚಾರಗಳನ್ನು ನಮ್ಮ ಜನಗಳಿಗೆ ಅಥವಾ ನಮ್ಮ ರಾಜ್ಯಕ್ಕೆ, ದೇಶಕ್ಕೆ ಕೊಟ್ಟರೆ ಒಳ್ಳೆಯದೇನೋ ಎನ್ನತಕ್ಕಂಥ ಭಾವನೆಯಿಂದ ಈ ಮಾತುಗಳನ್ನು ಹೇಳುತ್ತಾ, ಈ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ನಾನು ಕೆಲವೇ ನಿಮಿಷಗಳ ಕಾಲ ಮಾತನಾಡುವ ಅವಕಾಶವನ್ನು ಪಡೆದಿದ್ದೇನೆ. ಈ ಒಂದು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ಧನ್ಯವಾದಗಳನ್ನು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎನ್. ಚಿಲುವರಾಯಸ್ವಾಮಿ (ನಾಗಮಂಗಲ): ಮಾನ್ಯ ಉಪಾಧ್ಯಕ್ಷರೇ, ಈ ಹೊಸ ಶತಮಾನದಲ್ಲಿ ಸನ್ಮಾನ್ಯ ರಾಜ್ಯಪಾಲರು ಕನ್ನಡದಲ್ಲಿ ಭಾಷಣವನ್ನು ಮಾಡಿ ನಮ್ಮ ಕರ್ನಾಟಕದ ಕೀರ್ತಿಯನ್ನು ಎತ್ತಿ ಹಿಡಿದಿದ್ದಾರೆ. ಅವರಿಗೆ ಈ ಸಂದರ್ಭದಲ್ಲಿ ನಾನು ಅಭಿನಂದನೆಯನ್ನು ಹೇಳುತ್ತೇನೆ. ಈಗಾಗಲೇ ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸದನದಲ್ಲಿ ಎರಡು ರಾಜ್ಯಪಾಲರ ಭಾಷಣಗಳಾಗಿವೆ. ಒಂದು ಆಯವ್ಯಯ ಸಹಾ ಮಂಡನೆಯಾಗಿದೆ. ಈ ಎರಡು ಭಾಷಣಗಳನ್ನು ನಾವು ನೋಡಿದರೆ ಬಹುತೇಕ ಮುಂದಿನ ಐದು ವರ್ಷಗಳ ಅವಧಿಯಲ್ಲಿ ರಾಜ್ಯದ ಎಲ್ಲಾ ಇಲಾಖೆಯ ಅಭಿವೃದ್ಧಿ ಕೆಲಸಗಳನ್ನೂ ಕೂಡ ಸಂಪೂರ್ಣವಾಗಿ ಮುಗಿಸಬೇಕೆಂಬ ಸರ್ಕಾರದ ಇಚ್ಛೆ ಎದ್ದು ಕಾಣುತ್ತದೆ. ಇದನ್ನು ನೋಡಿ ನಮಗೂ ಕೂಡ ಬಹಳ ಸಂತೋಷ ಆಯಿತು. ಇಂತಹ ಒಂದು ಸರ್ಕಾರ ಅಧಿಕಾರಕ್ಕೆ ಬಂತಲ್ಲಾ ಎಂದು ಅಭಿನಂದನೆಯನ್ನು ಹೇಳಬೇಕೆಂದು ನಮಗೆ ಆಗ ಅನಿಸಿತ್ತು. ಆದರೆ ಈ ವರ್ಷದ ಆಯವ್ಯಯವನ್ನು ಮಂಡನೆ ಮಾಡಿದಾಗ, ಅದನ್ನು ನೋಡಿ ನಮಗೆ ನಿರುತ್ಸಾಹ ಉಂಟಾಯಿತು. ನಾನು ಆಯವ್ಯಯವನ್ನು ಗಮನಿಸಿದಾಗ, ನಾವು ನಬಾರ್ಡ್‌ನಿಂದ, ವಿಶ್ವಸಂಸ್ಥೆಯಿಂದ ಸಾಲವನ್ನು ತರಲು ಪ್ರಯತ್ನ ಮಾಡುತ್ತಿದ್ದೇವೆ. ಅದನ್ನು ಮಾಡುತ್ತೇವೆ. ಇದನ್ನು ಮಾಡುತ್ತೇವೆ ಎಂಬ ಮಾತುಗಳೇ ಅದರಲ್ಲಿ ಹೆಚ್ಚಾಗಿರುವುದನ್ನು ಕಾಣುತ್ತಿದ್ದೇವೆ. ಕೃಷಿ, ತೋಟಗಾರಿಕೆ, ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಇಲಾಖೆಗಳಲ್ಲಿ ಗಣನೀಯವಾಗಿ ಸುಧಾರಿಸಲು ಸರ್ಕಾರ ದೃಢ ಸಂಕಲ್ಪ ಮಾಡಿದೆ ಎಂದು ಭಾಷಣದಲ್ಲಿ ಹೇಳಲಾಗಿದೆ. ಈ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ತೆಂಗಿನ ಗಿಡಕ್ಕೆ ನುಸಿ ರೋಗ ಬಂದು ರೈತರು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಆದರೆ, ಸರ್ಕಾರ ಇದಕ್ಕೆ ತಕ್ಷಣ ಏನಾದರೂ ಪರಿಹಾರ ಕಂಡುಹಿಡಿಯದೇ ಉದಾಸೀನ ಮನೋಭಾವನೆ ತೋರಿಸಿತು. ಸರ್ಕಾರ ನುಸಿ ರೋಗವನ್ನು ತಡೆಯುವುದಕ್ಕೆ ಮೊದಲೇ ಕ್ರಮಗಳನ್ನು ತೆಗೆದುಕೊಂಡಿದ್ದರೆ, ಅದಕ್ಕಾಗಿ ಈಗ ಸರ್ಕಾರ ಖರ್ಚು ಮಾಡುತ್ತಿರುವ ಹಣದ ಅರ್ಧದಷ್ಟು ಹಣ ಮಾತ್ರ ಸಾಕಾಗುತ್ತಿತ್ತು. ಆದರೆ ಸರ್ಕಾರ ರೋಗ ನಿವಾರಣಾ ಕ್ರಮಗಳನ್ನು ತೆಗೆದುಕೊಳ್ಳಲು ನಿಧಾನ ಮಾಡಿದ ಕಾರಣ ಇವತ್ತು ನುಸಿ ರೋಗ ಎಲ್ಲಾ ಕಡೆ ಆವರಿಸಿಕೊಂಡಿದೆ. ರಿಯಾಯಿತಿ ದರದಲ್ಲಿ ರೈತರಿಗೆ ಔಷಧಿಗಳನ್ನು ಸರಬರಾಜು ಮಾಡಬೇಕೇ? ಅಥವಾ ಉಚಿತವಾಗಿಯೇ ಅವುಗಳನ್ನು ಸರಬರಾಜು ಮಾಡಬೇಕೇ? ಎಂದು ಸರ್ಕಾರ ಯೋಚನೆ ಮಾಡಿಕೊಂಡು 2-3 ತಿಂಗಳುಗಳನ್ನು ಕಳೆಯಿತು. ನಂತರ ಕೊನೆಯಲ್ಲಿ ಶೇಕಡ 50ರಷ್ಟು ರಿಯಾಯಿತಿ ದರದಲ್ಲಿ ನುಸಿ ರೋಗ ನಿವಾರಣೆಗೆ ಅಗತ್ಯವಾದ ಔಷಧಿಗಳನ್ನು ಸರಬರಾಜು ಮಾಡಲು ಸರ್ಕಾರ ತೀರ್ಮಾನ ತೆಗೆದುಕೊಂಡಿತು. ಆದರೆ ಎಲ್ಲಾ ರೈತರೂ ಕೂಡ ಔಷಧಿಯನ್ನು ಕೊಂಡು ಗಿಡಕ್ಕೆ ಟ್ರೀಟ್‌ಮೆಂಟ್ ಕೊಡಿಸತಕ್ಕಂತಹ ಸ್ಥಿತಿಯಲ್ಲಿ ಇಲ್ಲ. ಇದರಿಂದಾಗಿ ರೋಗ ಸಂಪೂರ್ಣವಾಗಿ ನಿವಾರಣೆಯಾಗಿಲ್ಲ. ಒಂದು ಗ್ರಾಮ ಅಥವಾ ತಾಲ್ಲೂಕಿನಲ್ಲಿ ಕನಿಷ್ಟ 10 ತೆಂಗಿನ ತೋಟಕ್ಕೆ ಈ ನುಸಿ ರೋಗ ತಗುಲಿದ್ದರೆ, ಅವರಲ್ಲಿ ಕೇವಲ 8 ತೆಂಗಿನ ತೋಟದವರು ಮಾತ್ರ ಟ್ರೀಟ್‌ಮೆಂಟ್ ಮಾಡಿಸಿ ಇನ್ನುಳಿದವರು ಏನೂ ಕ್ರಮ ತೆಗೆದುಕೊಳ್ಳದಿದ್ದರೆ, ಈ ರೋಗ ಪುನಃ ಬರುವ ಅವಕಾಶ ಹೆಚ್ಚಾಗಿದೆ. ಇವತ್ತು ಸರ್ಕಾರ ಶೇಕಡ 75ರಷ್ಟು ರಿಯಾಯಿತಿ ದರದಲ್ಲಿ ಔಷಧಿಗಳನ್ನು ಒದಗಿಸುತ್ತಿದ್ದರೂ ಸಹಾ ಸಂಪೂರ್ಣವಾಗಿ ರೋಗವನ್ನು ನಿರ್ಮೂಲನ ಮಾಡತಕ್ಕ ವ್ಯವಸ್ಥೆಯನ್ನು ಮಾಡಿಲ್ಲ. ರೈತರು ಚೆನ್ನಾಗಿದ್ದರೆ, ಸರ್ಕಾರ ಚೆನ್ನಾಗಿ ಇರುತ್ತದೆ, ಸರ್ಕಾರ ರೈತರಿಗಾಗಿ ಹಣ ಖರ್ಚು ಮಾಡಿದರೆ ಏನೂ ತೊಂದರೆಯಾಗುವುದಿಲ್ಲ ಎಂಬ ಮನೋಭಾವನೆಯನ್ನು

ತೋರಿಸಿ ಸರ್ಕಾರದ ಹಿಂದೆ ಮುಂದೆ ಯೋಚಿಸದೇ ಈ ನುಸಿ ರೋಗ ಬಂದ ತಕ್ಷಣವೇ ರೋಗ ನಿವಾರಣೆಗಾಗಿ ಹಣ ಬಿಡುಗಡೆ ಮಾಡಿದ್ದರೆ, ಸರ್ಕಾರ ಈಗ ಖರ್ಚು ಮಾಡಿರುವ ಹಣದಲ್ಲಿ ಶೇಕಡ 25-30ರಷ್ಟನ್ನು ಮಾತ್ರ ಖರ್ಚು ಮಾಡಬೇಕಾಗುತ್ತಿತ್ತು. ರೋಗ ಸಂಪೂರ್ಣವಾಗಿ ನಿವಾರಣೆಯಾಗಿ ರೈತರಿಗೆ ಸಮಾಧಾನವಾಗಿ ಒಳ್ಳೆಯದಾಗುತ್ತಿತ್ತು. ಆದರೆ ಆ ಕೆಲಸವನ್ನು ಮಾಡುವುದರಲ್ಲಿ ಈ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ವಿದ್ಯುತ್ ಕ್ಷೇತ್ರದಲ್ಲಿ ಸರ್ಕಾರ ಬಹಳಷ್ಟು ಸುಧಾರಣೆಯನ್ನು ಮಾಡುತ್ತದೆ. ಇದಕ್ಕಾಗಿ 1500 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ ಎಂದು ಸರ್ಕಾರ ಆಯವ್ಯಯದಲ್ಲಿ ಹೇಳಿದೆ. ಆದರೆ ಕಳೆದ 5-6- ತಿಂಗಳಿನಲ್ಲಿ ನಾವು ಹಳ್ಳಿಗಳಿಗೆ ಹೋಗಲಿಕ್ಕೆ ಆಗದಂತಹ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಇವತ್ತು ಒಬ್ಬ ರೈತ ಏನಾದರೂ ಸಂಪನ್ಮೂಲ ಹೆಚ್ಚು ಮಾಡಿಕೊಳ್ಳಬೇಕೆಂದರೆ, ಆತ ಆರ್ಥಿಕವಾಗಿ ಅಭಿವೃದ್ಧಿಯಾಗಬೇಕೆಂದರೆ ಅವನ ಭೂಮಿಯಲ್ಲಿ ಬೆಳೆಯತಕ್ಕ ಬೆಳೆಗೆ ಲಾಭದಾಯಕವಾದ ಬೆಲೆ ಸಿಗಬೇಕು. ಲಾಭದಾಯಕವಾದ ಬೆಳೆ ಬೆಳೆಯಲು ಅವನಿಗೆ ನೀರಾವರಿ ಸೌಕರ್ಯಬೇಕು. ನೀರಾವರಿ ಸೌಕರ್ಯಕ್ಕಾಗಿ ಆತ ಬೋರ್‌ವೆಲ್ ಅಥವಾ ಬಾವಿಯನ್ನು ತೋಡಿಸಿ, ಅದರಿಂದ ನೀರನ್ನು ಮೇಲೆತ್ತುವ ಸಲುವಾಗಿ ವಿದ್ಯುಚ್ಛಕ್ತಿ ಸಂಪರ್ಕವನ್ನು ಬಯಸಿ ಇವತ್ತು ಅರ್ಜಿ ಸಲ್ಲಿಸಿದರೆ, ಅವನಿಗೆ ಕನಿಷ್ಠ 4 ವರ್ಷಗಳಿಗಿಂತ ಕಡಿಮೆ ಅವಧಿಯಲ್ಲಿ ಅದು ಸಿಕ್ಕುವ ವ್ಯವಸ್ಥೆ ಇಲ್ಲ. ಇಂತಹ ಒಂದು ವ್ಯವಸ್ಥೆಯಲ್ಲಿ ಯಾವ ರೀತಿ ರೈತ ತನ್ನ ಅಭಿವೃದ್ಧಿಯನ್ನು ಮಾಡಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ಈ ಸರ್ಕಾರ ಯೋಚನೆ ಮಾಡಿದೆಯೇ? ಈಗಾಗಲೇ ಸರ್ಕಾರ ವಿದ್ಯುತ್ ಬೆಲೆಯನ್ನು ಹೆಚ್ಚಿಸುವುದಲ್ಲದೆ, ಮೀಟರ್‌ಗಳನ್ನು ಸಹಾ ಅಳವಡಿಸುವುದಾಗಿ ಹೇಳಿದೆ. ಅದನ್ನು ರೈತರು ಬೇಡ ಎಂದು ಹೇಳುವುದಿಲ್ಲ. ಸರ್ಕಾರ ಸರಿಯಾದ ರೀತಿಯಲ್ಲಿ ವಿದ್ಯುತ್ ಸರಬರಾಜು ಮಾಡಿ ಬೆಲೆಯನ್ನು ನಿಗದಿಪಡಿಸಿದರೆ ಆ ಬೆಲೆಯನ್ನು ಕಟ್ಟಲಿಕ್ಕೆ ರೈತರು ಸಿದ್ಧವಾಗಿದ್ದಾರೆ. ಆದರೆ ವಿದ್ಯುಚ್ಛಕ್ತಿ ಯಾವಾಗ ಬರುತ್ತದೆ? ಯಾವಾಗ ಹೋಗುತ್ತದೆ ಎಂಬುದೇ ಗೊತ್ತಾಗುವುದಿಲ್ಲ. ದಿವಸಕ್ಕೆ ಒಂದು ಗಂಟೆ ಅಥವಾ ನಾಲ್ಕು ಗಂಟೆ ವಿದ್ಯುಚ್ಛಕ್ತಿ ಸರಬರಾಜು ಮಾಡುತ್ತೇವೆ ಎಂದು ಸರ್ಕಾರ ನಿರ್ದಿಷ್ಟ ಸಮಯವನ್ನು ನಿಗದಿಪಡಿಸಿದಲ್ಲಿ ರೈತರು ಆ ಸಂದರ್ಭದಲ್ಲಿ ವಿದ್ಯುಚ್ಛಕ್ತಿಯ ಉಪಯೋಗವನ್ನು ಮಾಡಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತಾರೆ. ಅದೂ ಸಹಾ ಇವತ್ತು ನಡೆಯುತ್ತಿಲ್ಲ. ಇಂತಹ ಒಂದು ಅವ್ಯವಸ್ಥೆ ದಿನೇ ದಿನೇ ಹೆಚ್ಚುತ್ತಿದೆ. ರೈತರಿಗಾಗಿ ಈ ಸರ್ಕಾರ ಇದೆ ಎಂದು ಹೇಳಿಕೊಳ್ಳುವ ನೀವು ಪ್ರಾರಂಭದಲ್ಲಿ ಇಷ್ಟೊಂದು ನಿರಾಶದಾಯಕವಾಗಿ ಆಡಳಿತ ನಡೆಸುತ್ತಿರುವುದನ್ನು ನೋಡಿದರೆ, ಇದೊಂದು ದೊಡ್ಡ ವಿಪರ್ಯಾಸ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಶಿಕ್ಷಣ ವ್ಯವಸ್ಥೆಯಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡುವುದಾಗಿ ಭಾಷಣದಲ್ಲಿ ಸರ್ಕಾರ ತಿಳಿಸಿದೆ. ಶಿಕ್ಷಕರ ಕೊರತೆ ನೀಗುವುದಲ್ಲದೆ ಶಾಲಾ ಕೊಠಡಿಗಳ ನಿರ್ಮಾಣ ಮಾಡಲಾಗುವುದು ಎಂದು ಸರ್ಕಾರ ಹೇಳಿದೆ. ಈಗಿರತಕ್ಕ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಣ 1:50ರ ಅನುಪಾತವನ್ನು 1:40ಕ್ಕೆ ಇಳಿಸುವುದಾಗಿ ಸರ್ಕಾರ ಹೇಳಿದೆ. ಆದರೆ ಇವತ್ತು ನನ್ನ ಕ್ಷೇತ್ರದಲ್ಲಿ ಅನೇಕ ಕಡೆ ಪ್ರವಾಸ ಮಾಡಿದಾಗ ನಾನು ನೋಡಿದಂತೆ 200-300 ಮಕ್ಕಳು ಇರತಕ್ಕ ಶಾಲೆಗಳಲ್ಲಿ ಕೇವಲ ಒಬ್ಬರೇ ಶಿಕ್ಷಕರು ಇದ್ದಾರೆ. ದಯಮಾಡಿ ಸರ್ಕಾರ ಮೊದಲು ಈಗಿರತಕ್ಕ ವ್ಯವಸ್ಥೆಯಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಣದ ಅನುಪಾತ 1:50ರಷ್ಟು ಇದೆಯೇ ಎಂಬುದನ್ನು

ಮೊದಲು ಗಮನಿಸಬೇಕು. ಇದನ್ನು ಸಂಪೂರ್ಣವಾಗಿ ಯಶಸ್ವಿಗೊಳಿಸಿದ ನಂತರ ನೀವು ಆದಕ್ಕಿಂತಲೂ ಇನ್ನೂ ಉನ್ನತ ಸ್ಥಿತಿಯಲ್ಲಿ ಬದಲಾವಣೆ ಮಾಡುವುದಕ್ಕೆ ಪ್ರಯತ್ನಿಸುವುದು ಸೂಕ್ತವೆಂದು ಅನ್ನಿಸುತ್ತದೆ. 400-500 ಮಕ್ಕಳಿರುವ ಕೆಲವೆಡೆ 2-3 ಕೊಠಡಿಗಳಿದ್ದರೆ ಇನ್ನೂ ಕೆಲವೆಡೆಗಳಲ್ಲಿ ಕೊಠಡಿಗಳೇ ಇಲ್ಲದಿರುವಂಥ ಶಾಲೆಗಳನ್ನು ಸಹ ನಾವು ನೋಡಿದ್ದೇವೆ. ಇಂತಹ ಒಂದು ವ್ಯವಸ್ಥೆಯಿರುವಾಗ "ನಾವು ಈಗಿರತಕ್ಕಂಥ ವ್ಯವಸ್ಥೆಯನ್ನು ಬದಲಾವಣೆ ಮಾಡಿ ಇನ್ನೂ ಒಳ್ಳೆಯ ವ್ಯವಸ್ಥೆ ತರುತ್ತೇವೆ" ಎಂದು ಭಾಷಣದಲ್ಲಿ ಹೇಳುವುದಾದರೆ ಇದು ಬರೀ ಭಾಷಣವಾಗುತ್ತದೆಯೇ ವಿನಾಃ ಕಾರ್ಯಗತವಾಗುವುದಿಲ್ಲವೆನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಇನ್ನೂ ಕಟ್ಟಿರತಕ್ಕಂಥ ಶಾಲಾ ಕೊಠಡಿಗಳ ಹೆಂಚುಗಳು ಹಾಳಾಗಿದ್ದು, ಗಳಗಳೆಲ್ಲವೂ ಮುರಿದು ಹೋಗಿವೆ. ಇದನ್ನು ದುರಸ್ತಿ ಮಾಡಿಸತಕ್ಕಂಥ ಪ್ರಯತ್ನವನ್ನು ಈ ಸರ್ಕಾರ ಮಾಡುತ್ತಿಲ್ಲ. ಜೊತೆಗೆ ಹೈಸ್ಕೂಲು ಹಾಗೂ ಕಾಲೇಜುಗಳ ಕಟ್ಟಡಗಳಂತೂ ತುಂಬಾ ಅವ್ಯವಸ್ಥೆಯಾಗಿದೆ. ಯಾವುದೇ ಹೈಸ್ಕೂಲು ಮತ್ತು ಕಾಲೇಜುಗಳಿಗೆ ಕೊನೇ ಪಕ್ಷ ಬೇಕಾಗಿರುವ ಶೇಕಡ 60-70 ರಷ್ಟು ಕೊಠಡಿಗಳ ಸೌಲಭ್ಯವಿಲ್ಲ. ಇಂತಹ ಒಂದು ವ್ಯವಸ್ಥೆಯಲ್ಲಿ ಇದನ್ನು ಯಾವ ರೀತಿ ಬದಲಾವಣೆ ಮಾಡಬಹುದು ಮತ್ತು ನಾವು ಯಾವ ರೀತಿ ಒಳ್ಳೆಯ ಸ್ಥಿತಿಯನ್ನು ನೋಡಲು ಸಾಧ್ಯ? ಆದುದರಿಂದ, ಇದನ್ನು ಗಮನದಲ್ಲಿಟ್ಟುಕೊಂಡು ನೀವು 40ಕ್ಕೆ ಇಳಿಸುವ ಬದಲು ಇರತಕ್ಕಂಥ 50 ಮಕ್ಕಳಿಗೆ ಒಬ್ಬ ಶಿಕ್ಷಕರು ಮತ್ತು 50 ಮಕ್ಕಳಿಗೆ ಒಂದು ಕೊಠಡಿ ಸೌಲಭ್ಯವೇನಿದೆ ಇದನ್ನೇ ಮುಂದುವರಿಸಬೇಕೆಂದು ನನ್ನ ತಾಲ್ಲೂಕಿನ ಬಗ್ಗೆ ಹೇಳಬೇಕೆಂದರೆ, ನೂರು ಮಕ್ಕಳಿಗೆ ಒಬ್ಬ ಶಿಕ್ಷಕರು ಇರಬಹುದೆನ್ನುವ ಭಾವನೆ ನನಗಿದೆ ಅಥವಾ ನೂರು ಮಕ್ಕಳಿಗೆ ಒಂದು ಕೊಠಡಿಯಿರಬಹುದು. ಆದಕಾರಣ, 50 ಮಕ್ಕಳಿಗೆ ಒಬ್ಬ ಶಿಕ್ಷಕರಂತೆ ಮತ್ತು ಒಂದು ಕೊಠಡಿ ಸೌಲಭ್ಯ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ.

ಇನ್ನು ನೀರಾವರಿ ಕುರಿತು ಹೇಳುವುದಾದರೆ, ಇದಕ್ಕೆ ನಾವು ಪ್ರಥಮ ಆದ್ಯತೆ ನೀಡುತ್ತೇವೆಂದು ಸರ್ಕಾರ ಪದೇ ಪದೇ ಹೇಳುತ್ತದೆ. ಆದರೆ, ನನ್ನ ತಾಲ್ಲೂಕಿನ ಕಾವೇರಿ ಬೇಸಿನ್‌ನಲ್ಲಿ ಬರುವ ಹೇಮಾವತಿ ಯೋಜನೆ ಏನಿದೆ, ಇದಕ್ಕೆ ಸಂಬಂಧಿಸಿದಂತೆ ತುಮಕೂರು ಮತ್ತು ಗೊರೂರಿನಲ್ಲಿ ಎರಡು ಚೀಫ್ ಇಂಜಿನಿಯರುಗಳ ಕಛೇರಿಗಳಿದ್ದು, ಸದರಿ ಕಛೇರಿಗಳ ವ್ಯಾಪ್ತಿಗೆ ಬರತಕ್ಕಂಥ ಕೆಲಸಗಳನ್ನು ಕೈಗೆತ್ತಿಕೊಳ್ಳಲು ತುಮಕೂರಿಗೆ ಈ ವರ್ಷ ಕೊಟ್ಟಿರತಕ್ಕಂಥ ಅನುದಾನ 55 ಕೋಟಿ ರೂಪಾಯಿಗಳು. ಇದರಲ್ಲಿ ಲ್ಯಾಂಡ್ ಅಕ್ವಿಜಿಷನ್‌ಗೆ ಮತ್ತು ಸಂಬಳಗಳಿಗೆಂದು ಕಳೆದು, 39 ಕೋಟಿ ರೂಪಾಯಿಗಳು ಉಳಿಯುತ್ತದೆ. ಆದರೆ, ಅಲ್ಲಿ 50 ಕೋಟಿ ರೂಪಾಯಿಗಳಷ್ಟು ಬಿಲ್ ಬಾಕಿ ಇದೆ. ಇಷ್ಟೊಂದು ರೀತಿಯ ಅವ್ಯವಸ್ಥೆಯಲ್ಲಿ ನಾವು ಏನು ನೀರಾವರಿ ಕೆಲಸಗಳನ್ನು ಮಾಡುವುದಕ್ಕಾಗುತ್ತದೆಯೇ ಎನ್ನುವುದರ ಬಗ್ಗೆ ತಾವು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ತಿಳಿಸಬೇಕು. ಇವೊತ್ತು ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಲ್ಲ. ಹಿರಿಯ ಸಚಿವರಾದ ಫೋರ್ಡೆಯವರಿದ್ದಾರೆ. ಅವರಲ್ಲಿ ನಾನು ಹೇಳುವುದೇನೆಂದರೆ, 39 ಕೋಟಿ ರೂಪಾಯಿಗಳ ಅನುದಾನ ಕೊಟ್ಟರೆ ಅದನ್ನು ಅಲ್ಲಿರುವ ಕಛೇರಿಯ ಅಧಿಕಾರಿ, ಸಿಬ್ಬಂದಿಗಳ ಸಂಬಳಕ್ಕಷ್ಟೆ ಕೊಡಬೇಕಾಗುತ್ತದೆಯೇ ವಿನಾಃ ಬಾಕಿ ಬಿಲ್ಲನ್ನು ಪಾವತಿಸುವುದಕ್ಕಾಗುವುದಿಲ್ಲ. ಪ್ರಸಕ್ತ ವರ್ಷ ಆ ಭಾಗದಲ್ಲಿ ಕೈಗೆತ್ತಿಕೊಂಡಿರುವ ಯೋಜನೆಯ ಕಾಮಗಾರಿಯನ್ನು ಏನು ಮಾಡುತ್ತೀರಿ? ಏನು

ಮಾಡಲು ಸಾಧ್ಯ? ಎಂಬುದಕ್ಕೆ ನಾನು ತಮ್ಮಿಂದ ಉತ್ತರವನ್ನು ನಿರೀಕ್ಷಿಸುತ್ತಿದ್ದೇನೆ. ಇನ್ನು ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ಒಬ್ಬ ವ್ಯಕ್ತಿಗೆ ದಿನವೊಂದಕ್ಕೆ 55 ಲೀಟರ್‌ಗಳಷ್ಟು ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತೇವೆಂದು ಸದನದಲ್ಲಿ ಸಾಕಷ್ಟು ಬಾರಿ ಹೇಳಿರುವುದನ್ನು ನಾವು ಕೇಳಿದ್ದೇವಲ್ಲದೆ, ಪತ್ರಿಕೆಗಳಲ್ಲೂ ನೋಡಿದ್ದೇವೆ. ಆದರೆ, ಪ್ರತಿ ಗ್ರಾಮದಲ್ಲೂ ವ್ಯಕ್ತಿಯೊಬ್ಬನಿಗೆ ದಿನವೊಂದಕ್ಕೆ ಕನಿಷ್ಠ 1-2 ಲೀಟರ್‌ಗಳಷ್ಟು ಕುಡಿಯುವ ನೀರು ಸಿಗತಕ್ಕಂಥ ವ್ಯವಸ್ಥೆಯಿಲ್ಲ. ಇದಕ್ಕೆ ಉದಾಹರಣೆಗೆ, ನನ್ನ ಕ್ಷೇತ್ರದ ವ್ಯಾಪ್ತಿಗೆ ಬರುವ ಸಂಪನಹಳ್ಳಿ, ಹೊಂಬಾಳ ಕೊಪ್ಪಲು ಮತ್ತು ಅರಕೆರೆ ಹಳ್ಳಿಯನ್ನು ಹೇಳಿದ್ದೇನೆ. ಈ ಹಳ್ಳಿಗೆ ಕಿರು ನೀರು ಸರಬರಾಜು ಯೋಜನೆ ಮಂಜೂರಾಗಿ ನಾಲ್ಕು ವರ್ಷಗಳಾಗಿದ್ದರೂ ಇನ್ನೂ ಕೆಲಸವಾಗಿರುವುದಿಲ್ಲ. ಇಂತಹ ಯೋಜನೆಯಿಲ್ಲದಿರತಕ್ಕಂಥ ಇನ್ನೂ 50-100 ಹಳ್ಳಿಗಳಿವೆ. ಪರಿಸ್ಥಿತಿ ಹೀಗಿರುವಾಗ 55 ಲೀಟರ್‌ಗಳಷ್ಟು ಕುಡಿಯುವ ನೀರು ಒದಗಿಸತಕ್ಕಂಥ ವ್ಯವಸ್ಥೆಯನ್ನು ಹೇಗೆ ಮಾಡುತ್ತೀರಿ? ನೀವು ಭಾಷಣದಲ್ಲಿ ಮಾತ್ರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಯೋಜನೆಗಳನ್ನು ಅನುಷ್ಠಾನಗೊಳಿಸದೆ ನೀವು ವಿಫಲರಾಗುತ್ತಿದ್ದೀರಿ. ಜನರು ನಿಮ್ಮ ಬಗ್ಗೆ ನಂಬಿಕೆಯಿಟ್ಟುಕೊಂಡು, ನಿಮಗೆ ಬಹುಮತ ಕೊಟ್ಟು ಗೆಲ್ಲಿಸಿದ್ದಾರೆ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು) ನಾವು ಈ ಶಾಸನಸಭೆಗೆ ಹೊಸದಾಗಿ ಆರಿಸಿ ಬಂದಿರುವ ಸದಸ್ಯರಾಗಿದ್ದರೂ ಸಾಕಷ್ಟು ಬಾರಿ ಕೆಲವು ಮಾತುಗಳು ಕೇಳಿಬರುತ್ತವೆ. ಏನೆಂದರೆ, ಯಾರಾದರೂ ಸದಸ್ಯರು ಸರ್ಕಾರವನ್ನು ಪ್ರಶ್ನಿಸಿದಾಗ 'ನೀವು ಮಾಡಿದ್ದೀರಾ? ನಾವು ಮೆಜಾರಿಟಿ ಇದ್ದೇವೆ, ನಾವು ಮಾಡುತ್ತೇವೆ' ಎನ್ನುತ್ತಾರೆ. ದಯಮಾಡಿ ಈ ಶತಮಾನದಲ್ಲಾದರೂ ಇಂತಹ ಮಾತುಗಳನ್ನಾಡದೆ ಬಿಡಬೇಕೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮಗೆ ಸಿಗತಕ್ಕಂಥ ಅವಕಾಶದಲ್ಲಿ ನಾವು ಏನು ಕೆಲಸ ಮಾಡಬೇಕು ಮತ್ತು ಏನು ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ಯೋಚನೆ ಮಾಡಬೇಕೇ ವಿನಾಃ ಹಿಂದಿದ್ದವರು ತಪ್ಪು ಮಾಡಿದ್ದರೆ ಅದನ್ನವರು ಅನುಭವಿಸುತ್ತಾರೆ. ಮುಂದೆ ಬರುವವರು, ಅದು ಅವರಿಗೆ ಬಿಟ್ಟಿರುವ ವಿಚಾರ. ಇರತಕ್ಕಂಥ ವ್ಯವಸ್ಥೆಯಲ್ಲಿ ಮಾಡತಕ್ಕಂಥ ಕೆಲಸವನ್ನು ಸರಿಯಾಗಿ ಮಾಡಬೇಕೆಂಬುದು ನನ್ನ ಅನಿಸಿಕೆಯಾಗಿದೆ. ಇನ್ನು ಇದಕ್ಕಿಂತಲೂ ಬಹಳ ಪ್ರಮುಖವಾದುದು ಸಾಮಾಜಿಕ ನ್ಯಾಯ ಮತ್ತು ಸಾಮಾಜಿಕ ಶಾಂತಿ ಎಂಬುದನ್ನು ನಾವು ಕೇಳಿದ್ದೇವೆ. ಗ್ರಾಮ ಪಂಚಾಯಿತಿ ಚುನಾವಣೆಗಳನ್ನು ನಡೆಸಿದಾಗ ನಮಗೆ ಬಹಳ ಸಂತೋಷವಾಯಿತು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಫೋರ್ಡ್‌ಡೆಯವರು ಯಾವೊಬ್ಬರೂ ಕೂಡ ಮಾತನಾಡದಿರುವ ರೀತಿಯಲ್ಲಿ ಮೀಸಲಾತಿ ನಿಯಮ ತಂದು ಅಧ್ಯಕ್ಷರ, ಉಪಾಧ್ಯಕ್ಷರ ಚುನಾವಣೆಗಳನ್ನು ನಡೆಸಿದರು. ಇದರ ಬಗ್ಗೆ ಎಲ್ಲರೂ ಸಂತೋಷವನ್ನು, ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದಂಥ ಸಂದರ್ಭದಲ್ಲಿ ನಂತರ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳ ಚುನಾವಣೆಯಾದಾಗ ಎರಡು ತಿಂಗಳುಗಳಲ್ಲಿ ಅದನ್ನು ಮುಂದುವರೆಸುವುದಕ್ಕೆ ಸಾಧ್ಯವಾಗಲಿಲ್ಲ. ಇದನ್ನೇ ಮುಂದುವರೆಸಿದ್ದಿದ್ದರೆ ನಿಮಗೆ ಕೀರ್ತಿ ಬರುತ್ತಿತ್ತೇ ವಿನಾಃ ಇದರಿಂದ ನಿಮಗೆ ಹಾಗೂ ನಿಮ್ಮ ಸರ್ಕಾರಕ್ಕೆ ಕೆಟ್ಟದ್ದನ್ನು ಬಯಸತಕ್ಕಂಥದ್ದಾಗಲೀ ಅಥವಾ ಕೆಟ್ಟ ಸನ್ನಿವೇಶವಾಗಲೀ ನಿರ್ಮಾಣವಾಗುತ್ತಿರಲಿಲ್ಲವೆಂಬುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಕೆಎಸ್‌ಆರ್‌ಟಿಸಿ ಕುರಿತು ಹೇಳುವುದಾದರೆ, ನನ್ನ ತಾಲ್ಲೂಕಿನ ವ್ಯಾಪ್ತಿಗೆ ಸುಮಾರು 500 ಹಳ್ಳಿಗಳು ಬರುತ್ತಿದ್ದು, ಮಂಡ್ಯ ಜಿಲ್ಲೆ ಒಂಭತ್ತು ಕ್ಷೇತ್ರಗಳ ಜಿಲ್ಲೆಯಾಗಿದ್ದರೂ

ಕೂಡ ಒಂದೇ ಡಿಪೋ ಇದೆ. ಒಂದೇ ಡಿಪೋವಿನಿಂದ ಒಂಭತ್ತು ಕ್ಷೇತ್ರಗಳಿಗೂ ಬಸ್ ಸಂಚಾರ ಸೌಕರ್ಯವನ್ನು ಒದಗಿಸಲು ಸಾಧ್ಯವಿಲ್ಲ. ಇವೊತ್ತು ಆ ಡಿಪೋನಿಂದ ನಮ್ಮ ತಾಲ್ಲೂಕಿಗೆ ಒಂದೆರಡು ಬಸ್ಸುಗಳ ಸಂಚಾರ ಸೌಕರ್ಯ ಕಲ್ಪಿಸುವಲ್ಲಿ ಸಮಸ್ಯೆ ಇದೆ. ತಾಲ್ಲೂಕು ಕೇಂದ್ರದಿಂದ 20-30 ಕಿಲೋಮೀಟರ್‌ಗಳವರೆಗೆ, ಕನಿಷ್ಠ ಪಕ್ಷ 15 ಕಿಲೋಮೀಟರ್‌ಗಳವರೆಗೆ ಹಳ್ಳಿಗಳಿಗೆ ಹೋಗಲು ಬಸ್ ಸೌಕರ್ಯ ಇಲ್ಲದಿರುವಂಥ ಪರಿಸ್ಥಿತಿ ಇದೆ. ಇದಕ್ಕೆ ನಿಮ್ಮ ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಂಡಿದೆ? ಇವೊತ್ತು ಸಾಮಾನ್ಯ ಜನರಿಗೆ ಮೂಲಭೂತವಾಗಿರುವ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಕ್ಕೆ ನಿಮ್ಮ ಪ್ರಯತ್ನವನ್ನು ನೀವು ಮಾಡುತ್ತಿಲ್ಲ. ಈ ಪ್ರಯತ್ನವನ್ನು ನೀವು ಮಾಡಿ, ಜನರು ನಿಮಗೆ ಕೊಟ್ಟಿರತಕ್ಕಂಥ ಬಹುಮತವನ್ನು ಸಾಬೀತುಗೊಳಿಸಬೇಕು. ಈ ಭಾಷಣವನ್ನು ಗಮನಿಸಿದ ಮೇಲೆ ಇನ್ನು ಏನೂ ಸಮಸ್ಯೆ ಉಳಿಯುವುದಿಲ್ಲ ಎನ್ನುವ ಮಟ್ಟಿಗೆ ಆ ಭಾಷಣ ಇದೆ. ಸರ್ಕಾರ ಈಗ ಹೋಗುತ್ತಿರುವ ಹಾದಿ ಗಮನಿಸಿದರೆ ಹಿಂದೆ ಅಧಿಕಾರದಲ್ಲಿದ್ದ ಪಕ್ಷದ ಕೊನೆಯ ಆರು ತಿಂಗಳುಗಳಲ್ಲಿ ಯಾವ ಪರಿಸ್ಥಿತಿ ಇತ್ತೋ ಇವೊತ್ತು ಆ ರೀತಿಯ ಪರಿಸ್ಥಿತಿಯನ್ನು ನಾವು ನೋಡಲು ಸಾಧ್ಯವಾಗುತ್ತಿದೆಯೆಂದು ನಿನ್ನೆ ಯಾರೋ ಮಾತನಾಡುತ್ತಾ ಒಬ್ಬರು ಹೇಳಿದರು. ಆದುದರಿಂದ, ಇದನ್ನು ಬದಲಾವಣೆ ಮಾಡಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯಿಸುತ್ತೇನೆ.

ಇನ್ನು ಪಿಡಬ್ಲ್ಯೂಡಿ ಕುರಿತು ಹೇಳುವುದಾದರೆ, ಕೆಲವು ಸನ್ನಿವೇಶಗಳನ್ನು ನೋಡಿ ರಸ್ತೆಯ ವಿಚಾರದಲ್ಲಿ ನಾವು ಒಳ್ಳೆಯ ವ್ಯವಸ್ಥೆ ಕಾಣುತ್ತೇವೆಂದು ಸಾಕಷ್ಟು ಅಂದುಕೊಂಡೆವು. ನಮ್ಮ ಜಿಲ್ಲೆಯ ಒಂದು ವಿಭಾಗಕ್ಕೆ ಮಾರ್ಚ್ ತಿಂಗಳಿನಲ್ಲಿ ಒಂದು ಕೋಟಿ 70 ಲಕ್ಷ ರೂಪಾಯಿಗಳಷ್ಟು ಎಲ್.ಓ.ಸಿ. ಕೊಟ್ಟಿದ್ದರೆ, ಬಿಡುಗಡೆ ಮಾಡಿರುವುದು ನಾಲ್ಕು ಲಕ್ಷ ರೂಪಾಯಿಗಳು ಮಾತ್ರ. ಪ್ರತಿ ವರ್ಷವೂ ರಿಪೇರ್ ಅಂಡ್ ಮೇಂಟನೆನ್ಸ್‌ಗೆಂದು 15 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡುತ್ತಾರೆ. ಆ ಹಣ ಪ್ರತಿ ವರ್ಷವೂ ಖರ್ಚಾಗಬೇಕು. ಮತ್ತು ಅದರ ಬಿಲ್ ಸಹ ಆ ವರ್ಷವೇ ಪಾವತಿಯಾಗಬೇಕು. ಪಾವತಿಯಾಗಲಿಲ್ಲವೆಂದರೆ, ಮುಂದಿನ ವರ್ಷ ಯಾವುದನ್ನೇ ಆಗಲೀ ದುರಸ್ತಿಗೊಳಿಸುವುದಕ್ಕೆ ಅವಕಾಶವಿರುವುದಿಲ್ಲ. ಈ ವರ್ಷ ವಾರ್ಷಿಕ ನಿರ್ವಹಣೆಗೆ ನಮಗೆ 15 ಲಕ್ಷ ರೂಪಾಯಿಗಳನ್ನು ಏನು ಬಿಡುಗಡೆ ಮಾಡಿದ್ದಾರೆ, ಅದರಲ್ಲಿ ಒಂದು ರೂಪಾಯಿ ಸಹ ಪಾವತಿಯಾಗದಿರುವಂಥ ಪರಿಸ್ಥಿತಿಯನ್ನು ಇವೊತ್ತು ನೋಡಿದ್ದೇವೆ. ಇವೊತ್ತು ಮಂಜೂರಾಗಿರತಕ್ಕಂಥ ಯಾವುದೇ ಕೆಲಸಕ್ಕೆ ಮಾರ್ಚ್‌ನಲ್ಲಿ ಹಣ ಬಿಡುಗಡೆ ಆಗಿಲ್ಲದೆ ಎಲ್ಲಾ ಶೀರ್ಷಿಕೆಯಲ್ಲೂ ಕೂಡ ಬಾಕಿ ಬಿಲ್‌ಗಳು ಇರುವುದರಿಂದ ಯಾರೂ ಸಹ ಕೆಲಸವನ್ನು ಮಾಡುವುದಕ್ಕೆ ಮುಂದೆ ಬರುತ್ತಿಲ್ಲ. ಹೀಗಿರುವಾಗ ನಾವು ಹೊಸ ಯೋಜನೆಯನ್ನು ಹೇಗೆ ಪ್ರಾರಂಭ ಮಾಡಬೇಕು ಎಂಬ ಬಗ್ಗೆ ನಮ್ಮ ಮನಸ್ಸಿನಲ್ಲಿ ಕಾಡುತ್ತಿದೆ. ನಾನು ಅಧ್ಯಕ್ಷರ ಮೂಲಕ ಮುಖ್ಯಮಂತ್ರಿಯವರನ್ನು ವಿನಂತಿಸುವುದೇನೆಂದರೆ, ನೀರಾವರಿ ಮತ್ತು ಪಿ.ಡಬ್ಲ್ಯೂ.ಡಿ.ಯಲ್ಲಿ ಕೆಲಸಕ್ಕೆ ಕೊಟ್ಟಿರುವ ಅನುದಾನಕ್ಕೆ ಜೋಡಿಸಿಕೊಳ್ಳದೇ, ಪ್ರತ್ಯೇಕವಾಗಿ ಬಾಕಿ ಬಿಲ್ ಪಾವತಿಸಲು ಹಣವನ್ನು ಮಂಜೂರು ಮಾಡಿ, ಆ ಬಾಕಿ ಬಿಲ್‌ಗಳನ್ನು ಪಾವತಿ ಮಾಡಿಸಿದರೆ ಮಾತ್ರ ಈ ಸರ್ಕಾರ ಬಂದಮೇಲೆ ಈ ಎರಡು ಇಲಾಖೆಗಳಲ್ಲಿ ಕೆಲಸ ನಡೆಯುತ್ತಿದೆ ಎನ್ನುವುದು ಕಾಣುತ್ತದೆ ಎಂದು ಹೇಳಬಯಸುತ್ತೇನೆ. ಅಧ್ಯಕ್ಷರು ಈಗ ಬಂದಿದ್ದಾರೆ. ಅವರ ಮೂಲಕ ಹೇಮಾವತಿ ಯೋಜನೆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ

ಗಮನ ಸೆಳೆಯಬಯಸುತ್ತೇನೆ. ಹತ್ತಾರು ವರ್ಷಗಳಿಂದ ಹೇಮಾವತಿ ಯೋಜನೆ ಕೆಲಸವನ್ನು ನೋಡಿಕೊಂಡೇ ಬಂದಿದ್ದೇವೆ. ಇದರಲ್ಲಿ ತುಮಕೂರು ಕಡೆಯಿಂದ ಬರತಕ್ಕಂಥ ಎನ್.ಬಿ.ಸಿ.ಯಿಂದ ನೀರನ್ನು ಬಳಸಿ ಸುಮಾರೂ 70 ಲಕ್ಷ ಎಕರೆ ಪ್ರದೇಶ ನೀರಾವರಿ ವ್ಯವಸ್ಥೆಯನ್ನು ಪಡೆಯಬಹುದಾಗಿದೆ. ಆದರೆ ಇಲ್ಲಿಯವರೆಗೆ ಒಂದು ಕುಂಟೆ ಪ್ರದೇಶಕ್ಕೂ ನೀರಾವರಿಯಾಗಿಲ್ಲ. ಈ ವರ್ಷ ಹೇಗಾದರೂ ಮಾಡಿ 10 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಮಾಡಿಕೊಡುತ್ತೇವೆ ಎನ್ನುವ ಮಾತನ್ನು ಸಂಬಂಧಪಟ್ಟ ಮಂತ್ರಿಗಳು ಹಾಗೂ ಕಾರ್ಯದರ್ಶಿಯವರು ಹೇಳಿದ್ದಾರೆ. ಆದರೆ 50 ಕೋಟಿ ರೂಪಾಯಿಗಳ ಬಾಕಿ ಬಿಲ್‌ಗಳೇ ಇರುವಾಗ, ಇವರು ಕೊಟ್ಟಿರತಕ್ಕಂಥ 39 ಕೋಟಿ ರೂಪಾಯಿಗಳ ಅನುದಾನವನ್ನು ನೋಡಿದರೆ ಕೇವಲ ಬಾಕಿ ಬಿಲ್‌ಗಳ ಪಾವತಿಗಾಗಿಯೇ ನಾವು ಮತ್ತೆ ಮುಂದಿನ ವರ್ಷದ ಅನುದಾನವನ್ನು ನೋಡಬೇಕಾದ ಪರಿಸ್ಥಿತಿ ಇದೆ. ಹೀಗಿರುವಾಗ ಈ ವರ್ಷವೂ ಕೂಡ ನೀರಾವರಿ ವ್ಯವಸ್ಥೆಯಾಗುವುದಿಲ್ಲವೆಂದು ನಮಗೆ ಮನವರಿಕೆಯಾಗುತ್ತದೆ. ಆದುದರಿಂದ ಬಾಕಿ ಬಿಲ್ ಪಾವತಿಗಾಗಿಯೇ ಹೆಚ್ಚುವರಿ ಅನುದಾನವನ್ನು ಕೊಟ್ಟು ಈಗೇನು 39 ಕೋಟಿ ರೂಪಾಯಿಗಳ ಅನುದಾನವನ್ನು ಕೊಟ್ಟಿದ್ದಾರೆ. ಅದನ್ನು ನೀರಾವರಿ ಸೌಲಭ್ಯ ಒದಗಿಸುವುದಕ್ಕೆ ಖರ್ಚು ಮಾಡಲು ಅನುವು ಮಾಡಿಕೊಡಬೇಕೆಂದು ಬಹಳ ವಿನಮ್ರವಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಂದು ಪಿ.ಡಬ್ಲ್ಯೂ.ಡಿಯಲ್ಲೂ ಸಹ ಇದೇ ಪರಿಸ್ಥಿತಿ ಇದೆ. ಒಟ್ಟಾರೆಯಾಗಿ ನಾನು ಹೇಳುವುದೇನೆಂದರೆ ನೀವು ರೈತರಿಗೆ ಯಾವುದೇ ತರವಾದ ಹೊಸ ಯೋಜನೆಯನ್ನು ಕೊಡುತ್ತೇವೆ ಎನ್ನುವುದಕ್ಕಿಂತ, ಈಗಿರತಕ್ಕಂಥ ವ್ಯವಸ್ಥೆಗಳಿಗೆ ಹಣ ಕಡಿಮೆಯಾಗದೇ ಇರುವ ಹಾಗೆ ಮತ್ತು ರೈತರಿಗೆ ಯಾವುದೇ ತೊಂದರೆಯಾಗದ ಹಾಗೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಸರ್ಕಾರ ಮಾಡಬೇಕಾದ ಅವಶ್ಯಕತೆ ಇದೆ. ಈಗಾಗಲೇ ಬೆಲೆ ಏರಿಕೆ ಬಗ್ಗೆ ಸಾಕಷ್ಟು ಪ್ರತಿಭಟನೆಯನ್ನು ವಿರೋಧಪಕ್ಷದವರು ಹಾಗೂ ಆಡಳಿತ ಪಕ್ಷದವವೂ ಕೂಡ ಮಾಡಿ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಕೊಟ್ಟಿದ್ದೀರಿ. ಕೇಂದ್ರ ಸರ್ಕಾರ ಬೆಲೆ ಏರಿಸಿರುವಾಗ ಅದರ ಹೊರೆ ಬಡವರಿಗೆ ಕಡಿಮೆ ಮಾಡಲು ರಾಜ್ಯ ಸರ್ಕಾರದ ಕೊಡುಗೆ ಏನು ಎಂಬುದನ್ನು ನಾನು ಕೇಳಬಯಸುತ್ತೇನೆ. ಏಕೆಂದರೆ ಸಾಕಷ್ಟು ಸಂದರ್ಭಗಳಲ್ಲಿ ಹಿಂದಿನ ಕೇಂದ್ರ ಸರ್ಕಾರ ರೈತರಿಗೆ ಹಾಗೂ ಬಡ ಜನರಿಗೆ ಕೊಡದೇ ಇರತಕ್ಕಂಥ ರಿಯಾಯಿತಿಗಳನ್ನು ಹಿಂದಿನ ರಾಜ್ಯ ಸರ್ಕಾರ ಕೊಟ್ಟು ರೈತರಿಗೆ ಅನುಕೂಲವನ್ನು ಮಾಡಿಕೊಟ್ಟಿದೆ. ನ್ಯಾಯ ಬೆಲೆ ಅಂಗಡಿಗಳಲ್ಲಿ ಅಕ್ಕಿಯ ಬೆಲೆ 3-80 ಪೈಸೆ ಇದ್ದಾಗ ನಮ್ಮ ಕರ್ನಾಟಕ ಸರ್ಕಾರ 1-80 ಪೈಸೆಗಳನ್ನು ಕೇಂದ್ರ ಸರ್ಕಾರಕ್ಕೆ ಕಟ್ಟಿ ರೈತರಿಗೆ ಮತ್ತು ಬಡವರಿಗೆ ಅಕ್ಕಿ ಬೆಲೆಯಲ್ಲಿ ರಿಯಾಯಿತಿಯನ್ನು ಕೊಟ್ಟಿದೆ. ಈ ರೀತಿಯ ಕಾರ್ಯಕ್ರಮಗಳೇನಾದರೂ ಹಾಕಿಕೊಳ್ಳುತ್ತೀರಾ? ಈ ರೀತಿ ಮಾಡಿದರೆ ರೈತರ ಬಗ್ಗೆ ನಿಮ್ಮ ಕಾಳಜಿ ಏನು ಎಂಬುದು ಗೊತ್ತಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರ ಜೊತೆಗೆ ಇಂದು ಬಡವರಿಗೆ ಹಾಗೂ ಅಮಾಯಕರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಸರ್ಕಾರ ಗಮನವನ್ನು ಹರಿಸಬೇಕಾದ ಅವಶ್ಯಕತೆ ಇದೆ. ನನ್ನ ಜಿಲ್ಲೆಯ ಬಗ್ಗೆ ವಿಶೇಷವಾಗಿ ಒಂದು ಅವಕಾಶವನ್ನು ತೆಗೆದುಕೊಂಡು ವಿಷಯವನ್ನು ಹೇಳಿದ್ದೆವು. ಆದರೂ ಸಹ ಅಲ್ಲಿ ಅಮಾಯಕರಿಗೆ ತೊಂದರೆ ನಿಂತಿಲ್ಲ. ಒಂದು ಮನೆಯನ್ನು ಕಟ್ಟಿಕೊಡುವುದು ಎಷ್ಟು ಮುಖ್ಯವೋ ಹಾಗೆಯೇ ಇರತಕ್ಕಂಥ ಮನೆಯನ್ನು ಹಾಳು ಮಾಡದೇ ಇರಲು ಬೇಕಾದ ವ್ಯವಸ್ಥೆಯನ್ನು ಮಾಡಿ

ಜನರಿಗೆ ರಕ್ಷಣೆ ಕೊಡಬೇಕಾದ ಅವಶ್ಯಕತೆ ಇಂದು ಇದೆ. ಇದನ್ನು ಹೇಳಿದರೆ ಸರ್ಕಾರಕ್ಕೆ ವಿರೋಧವನ್ನು ವ್ಯಕ್ತಪಡಿಸಬೇಕು ಎನ್ನುವ ಉದ್ದೇಶದಿಂದಲೇ ಈ ಮಾತನ್ನು ಹೇಳುತ್ತಿದ್ದಾರೆ ಎನ್ನುವ ಭಾವನೆ ಈಗ ಬರುತ್ತದೆ. ಇದರ ಬಗ್ಗೆ ಮುಖತಃ ನೀವೇ ಹೋಗಿ ನೋಡಿ ಎಂದರೆ, ನಾವು ಹೋಗಿ ನೋಡಿದರೂ ಕೂಡ ನಮ್ಮ ಪಕ್ಷದ ಪರವಾಗಿಯೇ ಹೇಳಿಕೆಯನ್ನು ಕೊಡುತ್ತೇವೆಯಾದ್ದರಿಂದ ನಾವು ಅಲ್ಲಿಗೆ ಹೋಗುವುದಿಲ್ಲವೆನ್ನುತ್ತಾರೆ. ಆದರೆ ನಮಗೆ ಆ ಭಾವನೆ ನಿಮ್ಮ ಮೇಲೆ ಇಲ್ಲ. ಒಟ್ಟಿನಲ್ಲಿ ಅಮಾಯಕರಿಗೆ ಆಗುತ್ತಿರುವ ತೊಂದರೆಗಳು ನಿಲ್ಲಬೇಕು ಮತ್ತು ಇಂಥ ತೊಂದರೆಗಳು ಕೊನೆಯಾಗಬೇಕು ಎನ್ನುವುದೇ ನಮ್ಮ ಅಭಿಪ್ರಾಯವಾಗಿದೆ. ಇಂದು ಅಭಿವೃದ್ಧಿಗಿಂತ ಜನರು ಹಾಗೂ ಜನರ ಆಸ್ತಿಗಳಿಗೆ ರಕ್ಷಣೆ ಬೇಕಾಗಿದೆ. ಜನರು ಯಾವುದೇ ಭಯಭೀತಿ ಇಲ್ಲದೇ ಓಡಾಡಲು ವ್ಯವಸ್ಥೆಯಾಗಬೇಕು. ಇದನ್ನು ಸರ್ಕಾರ ತೀವ್ರವಾಗಿ ಗಣನೆಗೆ ತೆಗೆದುಕೊಂಡು ವ್ಯವಸ್ಥೆಗಳನ್ನು ಮಾಡಬೇಕೆಂದು ಹೇಳಿ ಇಂದು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

12. ಶಾಸನ ರಚನಾ ಕಾರ್ಯಕಲಾಪ

ಕರ್ನಾಟಕ ಪಂಚಾಯತ್ ರಾಜ್ ಎರಡನೇ (ತಿದ್ದುಪಡಿ) ವಿಧೇಯಕ, 2000 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ಮಾನ್ಯ ಅಧ್ಯಕ್ಷರೆ, "2000ನೇ ಇಸವಿಯ ಕರ್ನಾಟಕ ಪಂಚಾಯತ್ ರಾಜ್ ಎರಡನೇ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

(ಪ್ರಸ್ತಾವವನ್ನು ಮಂಡಿಸಲಾಯಿತು)

+ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿಯನ್ನು ಈಗಾಗಲೇ ಹೊರಡಿಸಿರುವ ಆರ್ಡಿನೆನ್ಸ್‌ನ್ನು ರೀಪ್ಲೇಸ್ ಮಾಡುವುದಕ್ಕೋಸ್ಕರ ತಂದಿದ್ದೇವೆ. ಇದು ಈಗಾಗಲೇ ಈ ಮನೆಯಲ್ಲಿ ಪಾಸ್ ಆಗಿದೆ. ಇದು ಮೇಲ್ಮನೆಗೆ ಹೋದಾಗ ಅವರು ಇದರ ಮೇಲೆ ಒಂದು ಚಿಕ್ಕ ತಿದ್ದುಪಡಿಯನ್ನು ಮಾಡಿದ್ದಾರೆ. ಅದನ್ನು ಸರ್ಕಾರ ಒಪ್ಪಿಕೊಂಡಿದೆ. ಆದಕಾರಣ ತಿದ್ದುಪಡಿಯೊಂದಿಗೆ ಪುನಃ ಈ ಸಭೆಯ ಮುಂದೆ ತಂದಿದ್ದೇವೆ. ಆರ್ಡಿನೆನ್ಸ್ ರೀಪ್ಲೇಸ್ ಬಿಲ್‌ನ್ನು ನಾವು ತಂದಾಗ ಇದರಲ್ಲಿ ಎರಡ್ಮೂರು ಬೇರೆ ಅಂಶಗಳನ್ನು ನಾವು ಸೇರಿಸಿದ್ದೆವು. ಈ ಅಂಶಗಳೆಂದರೆ ಪಂಚಾಯತಿಗೆ ಕೊಡುತ್ತಿದ್ದ ಒಂದು ಲಕ್ಷ ರೂಪಾಯಿಗಳ ಅನುದಾನವನ್ನು ಎರಡು ಲಕ್ಷ ರೂಪಾಯಿಗಳಿಗೆ ಏರಿಸಿದ್ದು, ಪಂಚಾಯತಿಗೆ ಸದಸ್ಯರಾಗಲು ಲಿಟ್ರಿನ್ ಇರಲೇಬೇಕು ಎಂದು ಏನು ಇತ್ತು ಆ ಲಿಟ್ರಿನ್ ಡಿಸ್‌ಕ್ವಾಲಿಫಿಕೇಶನ್‌ನ್ನು ನಾವು ತೆಗೆದುಹಾಕಿದೆವು. ಈ ಲಿಟ್ರಿನ್ ಡಿಸ್‌ಕ್ವಾಲಿಫಿಕೇಶನ್ ವಿಚಾರ ಹೈಕೋರ್ಟ್ ಮುಂದೆ ಹೋದಾಗ ಅವರು ಒಂದು ವಿಚಾರವನ್ನು ನಮ್ಮ ಮುಂದೆ ಇಟ್ಟು ನಿಗಧಿತ ಅವಧಿಯೊಳಗೆ ಅವರು ಲೆಟ್ರಿನ್‌ನ್ನು ಕಟ್ಟಿದರೆ ಡಿಸ್‌ಕ್ವಾಲಿಫಿಕೇಶನ್ ಅವಶ್ಯಕತೆ ಇಲ್ಲ ಎಂದು ಹೇಳಿದ್ದಾರೆ. ಏಕೆಂದರೆ ಕೇವಲ ಶೌಚಾಲಯ ಇಲ್ಲವೆಂದು ಹೇಳಿ ಸದಸ್ಯರಾಗಲು ಅವಕಾಶ